ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 107 RNI Number : KNKAN/25/A2770 26-04-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :107 ರಾಯಚೂರು 26-04-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಒಳಮೀಸಲಾತಿ ಅನುಷ್ಠಾನ ನಮ್ಮ ಹೋರಾಟಕ್ಕೆ ದೊರೆತ ಐತಿಹಾಸಿಕ ಜಯ : ಮುನಿಯಪ್ಪ

ಬೆಂಗಳೂರು, ಏ.25–

ರಾಜ್ಯ ಸರಕಾರವು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ಒಳಮೀಸಲಾತಿ ಅನುಷ್ಠಾನದ ತೀರ್ಮಾನವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿರುವ ರಾಜ್ಯ ಮಾದರ ಮಹಾಸಭಾ ಅಧ್ಯಕ್ಷ ಹಾಗೂ ಸಚಿವ ಕೆ.ಎಚ್.ಮುನಿಯಪ್ಪ, ಇದು ಕೇವಲ ಒಂದು ತೀರ್ಮಾನ ಅಲ್ಲ. ಇದು ನಾಲ್ವತ್ತು ವರ್ಷಗಳ ನೋವು, ಹೋರಾಟದ ಗೆಲುವು ಎಂದು ತಿಳಿಸಿದ್ದಾರೆ.



ಶನಿವಾರ ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಗ್ರೂಪ್ ಎ ಗೆ ಶೇ.5.25, ಗ್ರೂಪ್ ಬಿ ಗೆ ಶೇ.5.25 ಹಾಗೂ ಗ್ರೂಪ್ ಸಿ ಗೆ ಶೇ.4.5ರಷ್ಟು ಒಳಮೀಸಲಾತಿ ಹಂಚಿಕೆ ಮಾಡುವ ಮೂಲಕ ಸರಕಾರ ಸಾಮಾಜಿಕ ನ್ಯಾಯದ ದಾರಿಯಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ. ಇದು ಮಾದಿಗ ಸಮುದಾಯ ಸೇರಿದಂತೆ ಪರಿಶಿಷ್ಟ ಜಾತಿಯ ಎಲ್ಲ 101 ಸಮುದಾಯಗಳ ಬಹುದಿನದ ಬೇಡಿಕೆಗೆ ನ್ಯಾಯ ಒದಗಿಸಿದ ಐತಿಹಾಸಿಕ ನಿರ್ಧಾರವಾಗಿದೆ ಎಂದು ಹೇಳಿದ್ದಾರೆ.

ಚಿತ್ರದುರ್ಗದ ಪರಿಶಿಷ್ಟ ಜಾತಿಯ ಮಹಾಸಮಾವೇಶದಲ್ಲಿ ತೆಗೆದುಕೊಂಡ ನಿರ್ಣಯದಂತೆ ಹಾಗೂ 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷ ನೀಡಿದ ಮಾತಿನಂತೆ ಇಂದು ಆ ಭರವಸೆ ಈಡೇರಿದೆ. ಮಾತು ಕೊಟ್ಟರೆ ನೆರವೇರಿಸುವುದು ಕಾಂಗ್ರೆಸ್ ಪಕ್ಷದ ಸಂಸ್ಕೃತಿ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಾಮಾಜಿಕ ನ್ಯಾಯದ ಬದ್ಧತೆ ಹಾಗೂ 12ನೆ ಶತಮಾನದಲ್ಲಿ ಬಸವಣ್ಣವರು ನಡೆಸಿದ ಸಮಾನತೆ ಚಳವಳಿಯ ಸ್ಫೂರ್ತಿಯಿಂದ ಈ ತೀರ್ಮಾನ ಕಾರ್ಯರೂಪಕ್ಕೆ ಬಂದಿದೆ. ಇಂದು ತೆಗೆದುಕೊಂಡ ಈ ನಿರ್ಧಾರ ಇತಿಹಾಸದ ಪುಟಗಳಲ್ಲಿ ದಾಖಲಾಗುವ ಮಹತ್ವದ ಕ್ಷಣ ಎಂದು ಮುನಿಯಪ್ಪ ತಿಳಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಚಿತ್ರದುರ್ಗದ ಸಮಾವೇಶದಲ್ಲಿ ಘೋಷಣೆ ಮಾಡಿದಂತೆ ನಮ್ಮ ಸರಕಾರವು ಒಳಮೀಸಲಾತಿ ಅನುಷ್ಠಾನದಲ್ಲಿ ನುಡಿದಂತೆ ನಡೆದಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ಅವರ ಬೆಂಬಲ ಮತ್ತು ಮಾರ್ಗದರ್ಶನ, ಹಾಗೂ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಸಚಿವರಾದ ಎಚ್.ಕೆ.ಪಾಟೀಲ್, ಎಚ್.ಸಿ.ಮಹದೇವಪ್ಪ, ಆರ್.ಬಿ.ತಿಮ್ಮಾಪುರ, ಶಿವರಾಜ್ ತಂಗಡಗಿ, ಪ್ರಿಯಾಂಕ ಖರ್ಗೆ ಸೇರಿದಂತೆ ಸಚಿವ ಸಂಪುಟದ ಎಲ್ಲ ಸಹೋದ್ಯೋಗಿಗಳ ಸಮನ್ವಯದಿಂದ ಈ ಐತಿಹಾಸಿಕ ನಿರ್ಧಾರ ಸಾಧ್ಯವಾಗಿದೆ ಎಂದು ಅವರು ತಿಳಿಸಿದ್ದಾರೆ.

ಮಾದಿಗ ಸಮುದಾಯದ ಪರವಾಗಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಪ್ರಣಾಳಿಕೆ ಸಮಿತಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ಹಾಗೂ ಸಚಿವ ಸಂಪುಟದ ಎಲ್ಲಾ ಸಹೋದ್ಯೋಗಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಜೊತೆಗೆ, ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮಾರ್ಗದರ್ಶನಕ್ಕೂ ವಿಶೇಷವಾಗಿ ಧನ್ಯವಾದಗಳು. ನಾವೆಲ್ಲರೂ ಒಂದೇ ಕುಟುಂಬದಅಣ್ಣ-ತಮ್ಮಂದಿರು. ನಮ್ಮ ಪಾಲನ್ನು ನಾವು ಹಂಚಿಕೊಂಡಿದ್ದೇವೆ. ಭಿನ್ನಾಭಿಪ್ರಾಯಗಳಿಗೆ ಜಾಗ ಇಲ್ಲ. ಒಗ್ಗಟ್ಟಿನಿಂದ ಮುಂದೆ ಸಾಗೋಣ ಎಂದು ಅವರು ಮನವಿ ಮಾಡಿದ್ದಾರೆ.

ಇದು ಅಂತ್ಯ ಅಲ್ಲ ಇದು ಒಂದು ಹೊಸ ಆರಂಭ. ಸಮಾನತೆ, ಗೌರವ ಮತ್ತು ಹಕ್ಕುಗಳಿಗಾಗಿ ನಮ್ಮ ಹೋರಾಟ ಮುಂದುವರಿಯಬೇಕು, ಉತ್ತಮ ಶಿಕ್ಷಣವನ್ನು ಪಡೆದು ಸರಕಾರದ ಉದ್ಯೋಗ, ಶಿಕ್ಷಣ ಮತ್ತಿತರ ಅವಕಾಶಗಳನ್ನು ಪಡೆಯಲು ಸಮುದಾಯ ಜಾಗೃತಿ ಹೊಂದಬೇಕು ಮುನಿಯಪ್ಪ ಕರೆ ನೀಡಿದ್ದಾರೆ.

ಒಳಮೀಸಲಾತಿ ಘೋಷಣೆ ಐತಿಹಾಸಿಕ ನಿರ್ಧಾರ

ಬೆಳಗಾವಿ : ದಶಕಗಳ ಕಾಲದ ಬೇಡಿಕೆಯಾಗಿದ್ದ ಒಳಮೀಸಲಾತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಘೋಷಿಸಿರುವುದು ಐತಿಹಾಸಿಕ ನಿರ್ಧಾರ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.



ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಎಲ್ಲಾ ಸಚಿವರು ಹಾಗೂ ವಿವಿಧ ಸಮುದಾಯದ ಪ್ರತಿನಿಧಿಗಳ ಸಮ್ಮುಖದಲ್ಲಿ ಒಳಮೀಸಲಾತಿ ಘೋಷಿಸಲಾಗಿದೆ. ಈ ನಿರ್ಧಾರಕ್ಕೆ ಎಲ್ಲಾ ಸಮುದಾಯಗಳಲ್ಲಿಯೂ ಸಂತೋಷ ವ್ಯಕ್ತವಾಗಿದೆ ಮತ್ತು ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಸರ್ವಾನುಮತದಿಂದ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಒಳಮೀಸಲಾತಿ ಹಂಚಿಕೆ ಕುರಿತು ಬಿಜೆಪಿ ವಿರೋಧ ವ್ಯಕ್ತಪಡಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ವಿರೋಧ ಪಕ್ಷಗಳು ಸರಕಾರದ ಪ್ರತಿಯೊಂದು ನಿರ್ಧಾರದಲ್ಲೂ ಲೋಪದೋಷ ಹುಡುಕುವುದು ಸಹಜ. ಆದರೆ ಜನಹಿತದ ದೃಷ್ಟಿಯಿಂದ ತೆಗೆದುಕೊಳ್ಳಲಾದ ಈ ನಿರ್ಧಾರಕ್ಕೆ ಸಾರ್ವಜನಿಕ ಬೆಂಬಲವಿದೆ ಎಂದು ಅವರು ಸ್ಪಷ್ಟಪಡಿಸಿದರು. ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ವಿರೋಧ ಪಕ್ಷಗಳು ಇಂತಹ ಹೇಳಿಕೆಗಳನ್ನು ನೀಡುತ್ತವೆ ಎಂದು ಟೀಕಿಸಿದರು.

ಕಾಂಗ್ರೆಸ್ ಪಕ್ಷದ ಒಳಗಿನ ನಾಯಕತ್ವ ಗೊಂದಲ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಹೈಕಮಾಂಡ್ ಶೀಘ್ರದಲ್ಲೇ ಅಂತಿಮ ತೀರ್ಮಾನ ಕೈಗೊಳ್ಳಲಿದೆ. ಈಗಾಗಲೇ ಒಂದು ನಿರ್ಧಾರಕ್ಕೆ ಬಂದಿದ್ದು, ಸೂಕ್ತ ಸಮಯದಲ್ಲಿ ಜಾರಿಗೊಳಿಸಲಾಗುತ್ತದೆ ಎಂದು ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ದೆಹಲಿ ಭೇಟಿಯ ಕುರಿತು ಪ್ರತಿಕ್ರಿಯಿಸಿದ ಸಚಿವರು, ಅವರು ಪ್ರಮುಖ ಖಾತೆಗಳನ್ನು ಹೊಂದಿರುವುದರಿಂದ ಹಾಗೂ ಕೆಪಿಸಿಸಿ ಅಧ್ಯಕ್ಷರಾಗಿರುವುದರಿಂದ ಅಭಿವೃದ್ಧಿ ಹಾಗೂ ಆಡಳಿತ ಸಂಬಂಧಿತ ವಿಚಾರಗಳಿಗಾಗಿ ದೆಹಲಿಗೆ ಭೇಟಿ ನೀಡುವುದು ಸಾಮಾನ್ಯ. ಪ್ರತಿಯೊಂದು ಭೇಟಿಗೂ ರಾಜಕೀಯ ಅರ್ಥ ಕಲ್ಪಿಸುವುದು ಸರಿಯಲ್ಲ ಎಂದು ಸ್ಪಷ್ಟಪಡಿಸಿದರು.

ಗಂಜಹಳ್ಳಿ:ದಿ.ಪರುಶುರಾಮ ಸ್ಮರಣಾರ್ಥ ಉಚಿತ ಅರೋಗ್ಯ ತಪಾಸಣಾ ಶಿಬಿರ

ಅರೋಗ್ಯ ತಪಾಸಣೆ: ವಿದ್ಯಾರ್ಥಿಗಳ ತಂಡದ ಕಾರ್ಯ ಶ್ಲಾಘನೆ

ರಾಯಚೂರು, ಏ.25–

ಆಸ್ಪತ್ರೆಗಳಲ್ಲಿ ಗಂಟೆಗಟ್ಟಲೆ ಸಾಲುಗಟ್ಟಿ ನಿಂತು ವೈದ್ಯರು ಗೋಸ್ಕರ ಕಾಯುವ ಸನ್ನಿವೇಶದಲ್ಲಿ ಇಂದು ವೈದ್ಯರು ನಿಮ್ಮ ಬಳಿ ಬಂದು ಆರೋಗ್ಯ ಸೇವೆ ಮಾಡುತ್ತಿರುವುದು ಇದು ಬಡಜನರಿಗೆ ಅನುಕೂಲವಾಗುವ ಮಹತ್ವದ ಪುಣ್ಯದ ಕಾರ್ಯ ಎಂದು ಬ್ರಹ್ಮಕುಮಾರಿ ಆಶ್ರಮದ ಸಂಚಾಲಕಿ ಸ್ಮಿತಾ ಅಕ್ಕ ಅವರು ಹೇಳಿದರು.ಅವರು ಇಂದು ನಗರದ ತಾಲೂಕಿನ ಗಂಜಹಳ್ಳಿ ಗ್ರಾಮದಲ್ಲಿ ದಿ.ಪರುಶುರಾಮ ಅವರ ಸ್ಮರಣಾರ್ಥ ಅಂಗವಾಗಿ ವೈದೇಹಿ ಆಸ್ಪತ್ರೆ ಹಾಗೂ ಡಾ.ಅಗರವಾಲ ಕಣ್ಣಿನ ಆಸ್ಪತ್ರೆ ಹಿರಿಯ ವಿದ್ಯಾರ್ಥಿಗಳ ಸಂಘ ಹಾಗೂ ನಂದಿ ಪ್ರತಿಷ್ಠಾನ ದೇವಸೂಗೂರು ಕೇಂಬ್ರಿಡ್ಜ್ ತಾಂತ್ರಿಕ ಮಹಾವಿದ್ಯಾಲಯ ನಾರ್ತ್ ಕ್ಯಾಂಪಸ್ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.ಉಚಿತ ಆರೋಗ್ಯ ತಪಾಸಣಾ ಶಿಬಿರದಿಂದ ಬಡ ಜನರು ಆರೋಗ್ಯಕ್ಕೆ ಸಂಬಂಧಪಟ್ಟಂತೆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಉತ್ತಮ ಅವಕಾಶವಾಗಿದೆ. ದೇಹದ ಆರೋಗ್ಯ ಜೊತೆಗೆ ಮನಸಿನ ಆರೋಗ್ಯವು ಅಷ್ಟೇ ಮುಖ್ಯ



ಇಂದಿನ ಯುವಕರಲ್ಲಿ ಸ್ವಾರ್ಥ ಮತ್ತು ವ್ಯರ್ಥ ಹೆಚ್ಚಾಗಿದೆ.ಸ್ವಾರ್ಥದ ಪ್ರಪಂಚದಲ್ಲಿ ಜನರು ಸ್ವಾರ್ಥಿಗಳಾಗಿ ಜೀವನ ಮಾಡುವ ಕಾಲಘಟ್ಟದಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘ ಗಂಜಹಳ್ಳಿ ತಂಡದಿಂದ ದಿ.ಪರುಶುರಾಮ ಸ್ಮರಣಾರ್ಥವಾಗಿ ಅಂಗವಾಗಿ ಆಯೋಜಿಸಿದ ಉಚಿತ ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮ ಇದು ಬಹುದೊಡ್ಡ ಪುಣ್ಯದ ಕಾರ್ಯ ಎಂಬುದು ನನ್ನ ಭಾವನೆಯಾಗಿದೆ. ಬಹಳ ದೊಡ್ಡದ ಪುಣ್ಯದ ಕಾರ್ಯ, ಪ್ರತಿಯೊಬ್ಬರು ಉಚಿತ ಆರೋಗ್ಯ ತಪಾಸಣೆ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಹಳೆ ವಿದ್ಯಾರ್ಥಿಗಳ ಸಾಮಾಜಿಕ ಕಾರ್ಯ ಅತ್ಯಂತ ಶ್ಲಾಘನೀಯ ಎಂದರು. ಗಂಜಹಳ್ಳಿ ಹಾಗೂ ಸುತ್ತಮುತ್ತಲು ಗ್ರಾಮಸ್ಥರಿಗೆ ಆರೋಗ್ಯ ಶಿಬಿರ ಅನುಕೂಲವಾಗಲಿದೆ ಎಂದರು. ಮನುಷ್ಯನ ಜೀವನ ಬಹಳ ಮುಖ್ಯ. ನಮ್ಮ

4ನೇಯ ಪುಟಕ್ಕೆ

ರೈಲಿನಿಂದ ಕಾಲು ಜಾರಿ ಬಿದ್ದು ಯುವಕ ಮೃತ್ಯು

ಸಿಂಧನೂರು,ಏ.25–

ಚಲಿಸುತ್ತಿದ್ದ ರೈಲಿನಿಂದ ಬಾಗಿಲಲ್ಲಿ ನಿಂತಿದ್ದ ಯುವಕನೊಬ್ಬ ಕಾಲು ಜಾರಿ ಬಿದ್ದು ಮೃತಪಟ್ಟ ಘಟನೆ ತಾಲೂಕಿನ ಸಾಸಲಮರಿ ಕ್ಯಾಂಪ್ ಸಮೀಪ ಗುರುವಾರ ರಾತ್ರಿ ಸಂಭವಿಸಿದೆ.

ಮೃತರನ್ನು ಕಸಬಾ ಲಿಂಗಸುಗೂರು ಗ್ರಾಮದ ಸುಮಂತಕುಮಾರ (18) ಎಂದು ಗುರುತಿಸಲಾಗಿದೆ.

ಮಾಹಿತಿ ಪ್ರಕಾರ, ಸುಮಂತ ಕುಮಾರ ಸ್ನೇಹಿತರೊಂದಿಗೆ ಪ್ರವಾಸಕ್ಕೆ ತೆರಳಿ, ಹುಬ್ಬಳ್ಳಿಯಿಂದ ಸಿಂಧನೂರಿಗೆ ರೈಲಿನಲ್ಲಿ ಮರಳುತ್ತಿದ್ದರು. ಈ ವೇಳೆ ಸಾಸಲಮರಿ ಕ್ಯಾಂಪ್ ಸಮೀಪ ರೈಲು ಸಾಗುತ್ತಿದ್ದಾಗ ಬಾಗಿಲಲ್ಲಿ ನಿಂತಿದ್ದ ಅವರು ಕಾಲು ಜಾರಿ

4ನೇಯ ಪುಟಕ್ಕೆ

ರಾಜೇಶ ಅಪಸಾನಿರನ್ನು ಭೇಟಿ ಮಾಡಿದ ಕಮ್ಮಾ ಸಮಾಜದ ಪ್ರತಿನಿಧಿಗಳು

ರಾಯಚೂರು,ಏ.25–

ಆಂಧ್ರ ಪ್ರದೇಶದಲ್ಲಿ ಆಡಳಿತ ನಡೆಸುತ್ತಿರುವ ಪ್ರಾದೇಶಿಕ ಪಕ್ಷವಾದ ತೆಲುಗು ದೇಶಂ ಪಕ್ಷದ ವಕ್ತಾರರಾದ ರಾಜೇಶ ಅಪಸಾನಿ ಅವರು ಇಂದು ರಾಯಚೂರು ನಗರಕ್ಕೆ ಭೇಟಿ ನೀಡಿದ್ದರು ಕಮ್ಮಾ ಸಮಾಜದ ಪ್ರತಿನಿಧಿಗಳಿಗೆ ಭೇಟಿಯಾಗಿ ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಕಮ್ಮಾ ಹಿರಿಯರಾದ ಸೂರ್ಯದೇವರ ನಾಗೇಶ್ವರರಾವ್ ಅವರು, ಶಾಲು ಹೊದಿಸಿ ಹೂವಾಲೆ ಹಾಕಿ ಫಲ ಪುಷ್ಪ ತಾಂಬೂಲ ನೀಡಿ ಸತ್ಕರಿಸಿದರು.


ಸಮಾಜದ ಅನೇಕ ಪ್ರತಿನಿಧಿಗಳು ಭಾಗವಹಿಸಿದ್ದರು.



ಗೋರ್ಕಲ್ ಸರಕಾರಿ ಪ್ರೌಢ ಶಾಲೆಯ ಎಸ್ಎಸ್ಎಲ್‌ಸಿ ಫಲಿತಾಂಶ ಅಭೂತ ಪೂರ್ವ ಸಾಧನೆ

ಮಾನ್ವಿ,ಏ.25–

ತಾಲೂಕಿನ ಗೋರ್ಕಲ್ ಗ್ರಾಮದ ವಿದ್ಯಾರ್ಥಿಗಳು



ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆಯನ್ನು ತೋರಿದು ಶೇ100ರಷ್ಟು ಫಲಿತಾಂಶ ಪಡೆದಿದ್ದಾರೆ.

ಸುನೀತಾ ತಂದೆ ಅಂಬ್ರೇಶ ಸುಂಕೇಶ್ವರ ತಾಂಡ, 98.24% ಪಡೆದುಕೊಂಡಿತ್ತಾರೆ,

ನಿಹಾರಿಕಾ ತಂದೆ ಬಸವರಾಜ್ 96.00%, ನೀಲಗಂಗಾ ತಂದೆ ವಾಮನ ಗೌಡ 94.72% ತನುಶ್ರೀ ತಂದೆ ಬಸವರಾಜ್ 93.76% ಈ ವಿದ್ಯಾರ್ಥಿಗಳು ಉತ್ತಮ ಫಲಿತಾಂಶವನ್ನು ತೆಗೆದುಕೊಳ್ಳುವದರ ಮೂಲಕ ನಮ್ಮ ಶಾಲೆಗೆ ಜಿಲ್ಲೆಯಲ್ಲಿ 56 ರಲ್ಲಿಎರಡನೇ ಶ್ರೇಣಿ ಕ್ಲಾಸ್ 19 ಪಡೆದು ಕನ್ನಡ 125/125 ಒಬ್ಬ ವಿದ್ಯಾರ್ಥಿ , ಸಮಾಜ ವಿಜ್ಞಾನ 100/100 ಪಡೆದ ಒಬ್ಬ ವಿದ್ಯಾರ್ಥಿ, ಹಿಂದಿ 100/100 ಒಬ್ಬ ವಿದ್ಯಾರ್ಥಿ ಪಡೆದುಕೊಂಡಿರುತ್ತಾರೆ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಉತ್ತಮ ಫಲಿತಾಂಶ ತಂದ ವಿದ್ಯಾರ್ಥಿಗಳಿಗೆ ಶಾಲೆಯ ಮುಖ್ಯೋಪಾಧ್ಯಾಯರಾದ ಕಮಲಾ ಸೇರಿದಂತೆ ಎಲ್ಲಾ ಅಥಿತಿ ಶಿಕ್ಷಕರು ಅಭಿನಂದನೆ ಸಲ್ಲಿಸಿದ್ದರು.

ಮುಖ್ಯವಾಗಿ ಈ ಶಾಲೆಯಲ್ಲಿ ಯಾವುದೇ ಸರ್ಕಾರಿ ಶಿಕ್ಷಕರಿಲ್ಲದಿದರೂ ಆರು ಜನ ಅಥಿತಿ ಶಿಕ್ಷಕರಿಂದ ಪ್ರೋತ್ಸಾಹ ನೀಡುವುದರ ಮೂಲಕ ಉತ್ತಮ ಫಲಿತಾಂಶ ಬಂದಿರುವುರಿಂದ ಊರಿನ ಗಣ್ಯರು ಹಾಗೂ ತಾಲೂಕು ಶಿಕ್ಷಣ ಇಲಾಖೆ ಅಧಿಕಾರಿಗಳು ಗೌರವ ವ್ಯಕ್ತಪಡಿಸಿದರು.



3 ಲಕ್ಷ ಮೊತ್ತದ ಅಕ್ರಮ ಸೇಂದಿ ಜಪ್ತಿ ಮಾಡಿದ ಅಬಕಾರಿ ಪೋಲೀಸರು

ರಾಯಚೂರು ಏ24

ನಗರದ ಹೊರವಲಯದಲ್ಲಿ ಅಕ್ರಮ ಸೇಂದಿ ತಯಾರಿಕ ಘಟಕದ ಮೇಲೆ ಅಬಕಾರಿ ಪೊಲೀಸರ ದಾಳಿ ನಡೆಸಿದ್ದಾರೆ.

ರಾಯಚೂರು ನಗರದ ಹೊರವಲಯದ ಚಂದ್ರಬಂಡಾ ರಸ್ತೆಯಲ್ಲಿ ಇದ್ದ ತಯಾರಿಕ ಘಟಕ. ರಾಯಚೂರು ಅಬಕಾರಿ ಮೋನಪ್ಪ ಅವರ ನೇತೃತ್ವದಲ್ಲಿ ದಾಳಿನಡೆದಿದೆ.

ದಾಳಿಯಲ್ಲಿ ಮೂರು ಲಕ್ಷ ರೂಪಾಯಿ ಮೊತ್ತದ 1325 ಲೀಟರ್ ಅಕ್ರಮ ಸೇಂದಿ ಹಾಗೂ ಮೂರು ಬೈಕ್ ಗಳು ವಶಕ್ಕೆ ಪಡೆದಿದ್ದಾರೆ.

ನಗರದ ಚಂದ್ರಬಂಡಾ ರಸ್ತೆಯಲ್ಲಿ ನರಸಿಂಹಲು ಅಲಿಯಾಸ್ ಬ್ರೂಸ್ಲಿ, ಮಹೇಶ್ ಹಾಗೂ ನರೇಶ್ ಎನ್ನುವವರು ಅಕ್ರಮವಾಗಿ ಸಿ ಹೆಚ್ ಪೌಡರ ಬಳಿಸಿ ಸೇಂದಿ ತಯಾರಿಸುತಿದ್ದರು, ಖಚಿತ ಮಾಹಿತಿ ಮೇರೆಗೆ ಅಬಕಾರಿ ಪೊಲೀಸರಿಂದ ದಾಳಿ.ದಾಳಿಯ ಸಂದರ್ಭದಲ್ಲಿ ಆರೋಪಿಗಳು ಪರಾರಿಯಾಗಿದ್ದಾರೆ.

ಅಬಕಾರಿ ಕಾಯ್ದೆಯಡಿ ಪ್ರಕರಣ ದಾಖಲುಗಿದೆ.

ಬಡತನ ಮೆಟ್ಟಿನಿಂತು ಸಾಧನೆ ಮಾಡಿದ ಸೋಮವ್ವ

ಲಿಂಗಸೂಗೂರು,ಏ.25–

2025-26ನೇ ಸಾಲಿನ ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ಬಡತನವನ್ನು ಮೆಟ್ಟಿನಿಂತು ಸಾಧನೆ ಮಾಡಿದ್ದಾಳೆ. ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿ ಸೋಮವ್ವ ತಂದೆ ಬಡ್ಯಪ್ಪ 615 (98.4) ಅಂಕಗಳೊಂದಿಗೆ ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ.



ಸಮೀಪದ ಜಂಗಿರಾಂಪುರ್ ತಾಂಡದ ಬದ್ಯಪ್ಪ ಅವರ ಪುತ್ರಿ ಸೋಮವ್ವ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಅಡವಿಬಾವಿಯಲ್ಲಿ ಅಭ್ಯಾಸ ಮಾಡಿ, ಈ ಸಾಲಿನ 10ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಶೇಕಡಾ 98.40 ಅಂಕಗಳನ್ನು ಪಡೆದು ಶಾಲೆಗೆ ಟಾಪರ್ ಆಗಿದ್ದಾಳೆ.

ಬಡತನ ಓದಿಗೆ ಅಡ್ಡಿ ಬರೋದಿಲ್ಲ, ಎಂಬುದನ್ನು ತೋರಿಸಿ ಕೊಟ್ಟ ಸೋಮವ್ವ ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು, ವಾಸ ಮಾಡಲು ಸರಿಯಾದ ಮನೆ ಇಲ್ಲದ ಸಂಕಷ್ಟದ ಪರಿಸ್ಥಿತಿ ಇವೆಲ್ಲವನ್ನು ಮೀರಿ ಅಪೂರ್ವ ಸಾಧನೆ ಮಾಡಿದ್ದಾಳೆ.ಸತತ ಓದು, ಶ್ರೇದ್ದೆ,

ನಿಷ್ಠೆಯಿಂದ ನಿರಂತರವಾಗಿ ಅಧ್ಯಯನ ಮಾಡಿದ ಪರಿಣಾಮ ಇಂತಹ ಉನ್ನತ ಸಾಧನೆ ಸಾಧ್ಯವಾಗಿದೆ ಎಂದು ಶಿಕ್ಷಕರು ತಿಳಿಸಿದ್ದಾರೆ*4ನೇಯ ಪುಟಕ್ಕೆ*

ಬೀದಿ ನಾಯಿಗಳ ಕಾಟಕ್ಕೆ ಕಡಿವಾಣ ಹಾಕಲು ಎಸ್‌ಡಿಪಿಐ ಮನವಿ

ರಾಯಚೂರು,ಏ.25–

ನಗರದಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿದ್ದು, ಅವುಗಳಿಗೆ ಕಡಿವಾಣ ಹಾಕಿ ಸಂತ್ರಸ್ತರಿಗೆ ಪರಿಹಾರ ನೀಡಬೇಕು ಎಂದು ಎಸ್‌ಡಿಪಿಐ ಜಿಲ್ಲಾ ಘಟಕದಿಂದ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾ ಯಿತು.



ನಗರದಲ್ಲಿ ಹೆಚ್ಚುತ್ತಿರುವ ಬೀದಿ ನಾಯಿಗಳ ಹಾವಳಿಯನ್ನು ತಡೆಯಲು ತಕ್ಷಣ ಕ್ರಮ ಕೈಗೊಳ್ಳುವಂತೆ ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ, ಅನೇಕ ಬಾರಿ ಪ್ರತಿಭಟನೆ ಮಾಡಿದರೂ ಇದುವರೆಗೆ ಸಂಪೂರ್ಣ ನಿಯಂತ್ರಣ ಆಗಿಲ್ಲ. ಬೀದಿ ನಾಯಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಸಾರ್ವಜನಿಕರು, ವಿಶೇಷವಾಗಿ ಮಕ್ಕಳು ಮತ್ತು ವಿದ್ಯಾರ್ಥಿಗಳು ಭಯಭೀತರಾಗಿದ್ದಾರೆ ಎಂದು ದೂರಿದರು.

ಹಲವೆಡೆ ನಾಯಿಗಳ ದಾಳಿ ಮತ್ತು ಕಚ್ಚುವ ಘಟನೆಗಳು ವರದಿಯಾಗುತ್ತಿದ್ದು, ಜನರ ಸಂಚಾರಕ್ಕೂ ತೊಂದರೆ ಉಂಟಾಗಿದೆ. ಏಪ್ರಿಲ್ 20 ರಂದು ಜಾನಿಯಾ ಮೊಹಲ್ಲಾ ಬಳಿ ಬೀದಿ ನಾಯಿಯ ದಾಳಿಗೆ ಒಳಗಾಗಿ ಚಿಕ್ಕ ಮಗುವಿನ ದೇಹದ ಅನೇಕ ಭಾಗಗಳಲ್ಲಿ ಗಾಯಗಳಾಗಿವೆ. ಒಂದು ವರ್ಷದಿಂದ ಇಂತಹ ಅನೇಕ ಪ್ರಕರಣಗಳು ನಡೆಯುತ್ತಿವೆ. ಅನೇಕ ಬಾರಿ ಮಹಾನಗರ ಪಾಲಿಕೆಗೆ ಬೀದಿ ನಾಯಿಗಳ ನಿಯಂತ್ರಣಕ್ಕೆ ಮನವಿ ಮಾಡಿದಾಗ್ಯೂ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು.

2025ರಲ್ಲಿ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿ ತವಾಗಿ ದಾಖಲಿಸಿ ಕೊಂಡಿದ್ದ ಪ್ರಕರಣವನ್ನು ಉಲ್ಲೇಖಿಸಿರುವ ಎಸ್‌ಡಿಪಿಐ, ಈ ಸಂಬಂಧ ಸ್ಥಳೀಯ ಸಂಸ್ಥೆಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

ಬೀದಿ ನಾಯಿಗಳ ನಿಯಂತ್ರಣಕ್ಕಾಗಿ ಸೂಕ್ತ ಯೋಜನೆ ರೂಪಿಸಿ, ಸಾರ್ವಜನಿಕರ ಸುರಕ್ಷತೆ ಖಚಿತಪಡಿಸಬೇಕು ಎಂದು ಎಸ್‌ಡಿಪಿಐ ಮನವಿಯಲ್ಲಿ ಆಗ್ರಹಿಸಿದೆ. ನಗರದ ನಾಗರಿಕರ ಆತಂಕವನ್ನು ಗಮನದಲ್ಲಿಟ್ಟುಕೊಂಡು, ಮಹಾನಗರ ಪಾಲಿಕೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಸಂಘಟನೆ ಒತ್ತಾಯಿಸಿದೆ.

ದಿ. 26ರಂದು ಶ್ರೀ ಮಾರುತೇಶ್ವರ ಮಹಿಮೆ ಚಿತ್ರ ಬಿಡುಗಡೆ

ರಾಯಚೂರು, ಏ.25

ಹಟ್ಟಿ ಪಟ್ಟಣದ ವಂದಲಿ ಗ್ರಾಮದ ನೂರು ವರ್ಷದ ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡ ಶ್ರೀ ಮಾರುತೇಶ್ವರ ಮಹಿಮೆ ಚಲನಚಿತ್ರ ದಿ. 26ರಂದು ಬೆಳಿಗ್ಗೆ 10 ಗಂಟೆಗೆ ನಗರದ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಬಿಡುಗಡೆ ಪ್ರದರ್ಶನ ಕಾಣಲಿದೆ ಎಂದು ಚಿತ್ರದ ನಿರ್ದೇಶಕ ಶ್ರೀ ಭೀಮ್ ಅವರು ಹೇಳಿ ದರು.



ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ,ಈ ಚಿತ್ರವು ವಂದಲಿ ಗ್ರಾಮದ ಶ್ರೀ ಮಾರುತೇಶ್ವರ ದೇವರ ಮಹಿಮೆ, ಇತಿಹಾಸ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಪ್ರತಿಬಿಂಬಿಸುವ ರೀತಿಯಲ್ಲಿ ನಿರ್ಮಾಣಗೊಂಡಿದ್ದು, ಸ್ಥಳೀಯ ಭಕ್ತರ ಭಾವನೆಗಳಿಗೆ ಸ್ಪಂದಿಸುವಂತಾಗಿದೆ ಎಂದರು.

ಚಿತ್ರದಲ್ಲಿ ಸುತ್ತಮುತ್ತಲಿನ ಪ್ರದೇಶಗಳ ನೈಸರ್ಗಿಕ ಸೌಂದರ್ಯ ಮತ್ತು ಧಾರ್ಮಿಕ ಪರಂಪರೆಯನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ. ನಾಲ್ಕು ಭಕ್ತಿಗೀತೆಗಳನ್ನು ಒಳಗೊಂಡಿರುವ ಈ ಚಿತ್ರವು ಸುಮಾರು ಒಂದು ಗಂಟೆ ಅವಧಿಯದ್ದಾಗಿದೆ ಎಂದು ಅವರು ವಿವರಿಸಿದರು.ಚಿತ್ರದ ಪ್ರದರ್ಶನವು ಸಾರ್ವಜನಿಕರಿಗೆ ಉಚಿತವಾಗಿದ್ದು, ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಕಾರ್ಯಕ್ರಮದಲ್ಲಿ ನಗರದ ಗಣ್ಯರು, ಭಕ್ತರು, ಕಲಾಭಿಮಾನಿಗಳು ಹಾಗೂ ಚಿತ್ರತಂಡದ ಸದಸ್ಯರು ಭಾಗವಹಿಸಿ ಚಿತ್ರಕ್ಕೆ ಶುಭ ಹಾರೈಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಪ್ರಭು, ರಾಯಚೂರು ವೆಂಕಿ ಸೇರಿದಂತೆ ಚಿತ್ರತಂಡದ ಸದಸ್ಯರು ಸೇರಿದಂತೆ ಉಪಸ್ಥಿತರಿದ್ದರು.

ಸಿರುಗುಪ್ಪ: ಭಗೀರಥ ಮಹರ್ಷಿಯ ಆದರ್ಶ ಮೈಗೂಡಿಸಿಕೊಳ್ಳಿ – ಬಿ ಎಂ ಸತೀಶ್

ಸಿರುಗುಪ್ಪ-ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಭಗೀರಥ ಮಹರ್ಷಿಯ ಆದರ್ಶ ಗುಣ ತತ್ವ ಸಿದ್ಧಾಂತ ಪ್ರತಿಯೊಬ್ಬರು ಮೈಗೂಡಿಸಿಕೊಳ್ಳಬೇಕು ಎಂದು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಬಿ ಎಂ ನಾಗರಾಜ ಅವರ ಹಿರಿಯ ಸಹೋದರ ಸರ್ವಧರ್ಮೀಯರ ಸಂಘದ ಅಧ್ಯಕ್ಷರು ಬಿ ಎಂ ಸತೀಶ್ ಅವರು ಅಭಿಪ್ರಾಯಪಟ್ಟರು

ಸಿರುಗುಪ್ಪ ನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ ಅಧಿಕಾರಿಗಳ ಕಾರ್ಯಾಲಯದ ಸಭಾಭವನದಲ್ಲಿ ಕರ್ನಾಟಕ ಸರ್ಕಾರ ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಳ್ಳಾರಿ ತಾಲೂಕು ಆಡಳಿತ ತಾಲೂಕು ಪಂಚಾಯತ್ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಗರಸಭೆ ಎಲ್ಲಾ ಇಲಾಖೆಗಳ ಸಹ ಭಾಗಿತ್ವದಲ್ಲಿ



ಮಹರ್ಷಿ ಶ್ರೀ ಭಗೀರಥ ಅವರ ಜಯಂತಿ ಭಗೀರಥ ಮಹರ್ಷಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಪುಷ್ಪ ಗೌರವದೊಂದಿಗೆ ಅರ್ಪಿಸಿ ನಮನ ಸಲ್ಲಿಸಿ ಸ್ಮರಿಸಿ ಅವರು ಸರ್ವರನ್ನು ಉದ್ದೇಶಿಸಿ ಮಾತನಾಡುತ್ತಾ ಯಾವುದೇ ಕೆಲಸ ಮಾಡಬೇಕಾದರೆ ಏಕಾಗ್ರತೆಯಿಂದ ಮಾಡಬೇಕು ಪೌರಾಣಿಕ ಪುರುಷ ಸಮಾಜದಲ್ಲಿ ಇಂದಿಗೂ ಕಠಿಣ ಪರಿಶ್ರಮಕ್ಕೆ ಉದಾಹರಣೆಗೆ ನೀಡಲಾಗುತ್ತಿದೆ ಭಗೀರಥ ಎಂದರೆ ಸಾಧನೆಯ ಸಾಕ್ಷಾತ್ ಗಂಗೆಯನ್ನು ಧರೆಗಿಳಿಸಿದ ಮಹಾಪುರುಷ ಎಂದು ಅವರು ಕರೆ ನೀಡಿದರು

ತಾಲೂಕ ಕಚೇರಿಯ ಉಪತಹಶೀಲ್ದಾರ್ ಸಿದ್ದಾರ್ಥ ಕಾರಂಜಿ ಅವರು ಮಾತನಾಡಿ ಭಗೀರಥ ಉಪ್ಪಾರ ಸಮಾಜದ ಆರಾಧ್ಯ ಮಹಾನ್ ಛಲಗಾರ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಕೆ. ಮಲ್ಲಿಕಾರ್ಜುನ ಅವರು ಸರ್ವರನ್ನು ಸ್ವಾಗತ ಬಯಸಿ ಮಾತನಾಡುತ್ತಾ ತಪಸ್ಸಿ ನ ಮೂಲಕ ಗಂಗೆಯನ್ನು ಭೂಮಿಗೆ ತರುವಲ್ಲಿ ಭಗೀರಥನ ಪಾತ್ರ ಪ್ರತಿಮಾ ವಾದುದು ಪೂರ್ವಜನ ಆತ್ಮಕ್ಕೆ ಶಾಂತಿ ಒದಗಿಸಿದ ಮಹರ್ಷಿ ಭಗೀರಥ ಉಪ್ಪಾರು ಜನಾಂಗ ಸ್ವಾವಲಂಬಿ ಜೀವನ ನಡೆಸುವ ಸಮಾಜದ ಕಠಿಣಶ್ರಮ ಹೊಂದಿದ್ದಾರೆ ಸಾಧನೆ ಸಲೀಸು ಶ್ರಮದ ಜೀವಿಗಳು ಎಂದರು

ಡಾ ಬಿ ಆರ್ ಅಂಬೇಡ್ಕರ್ ಸಂಘದ ತಾಲೂಕ ಅಧ್ಯಕ್ಷರು ಕೊಡ್ಲೆ ಮಲ್ಲಿಕಾರ್ಜುನ ಅವರು ಮಾತನಾಡಿ ಮಹರ್ಷಿ ಭಗೀರಥ ಇಡೀ ಮನಕುಲಕ್ಕೆ ದೊರೆತ ಮಹಾನ್ ಕೊಡುಗೆ ಎಂದರು

ರಾವಿಹಾಳು ಹುಸೇನ್ ಪೀರ, ಕಂಬಳಿ ಮಲ್ಲಿಕಾರ್ಜುನ, ಈದ್ಗಾ ಮತ್ತು ಖಬರ ಸ್ಥಾನ್ ಸಮಿತಿಯ ಮಾಜಿ ಅಧ್ಯಕ್ಷರು ನಗರಸಭೆ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಹಂಡಿ ಹಾಷಿಂ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಶಾಂತಿ ಸಭೆ ಸದಸ್ಯರು ಸಮಾಜ ಸುಧಾರಕ ಅಬ್ದುಲ್ ನಬಿ, ಶ್ರೀ ಭಗೀರಥ ಮಹರ್ಷಿ ಸಂಘ ತಾಲೂಕು ಅಧ್ಯಕ್ಷರು ಹೆರೆಕಲ್ ಯು. ಹನುಮಂತಪ್ಪ, ಸಿರುಗುಪ್ಪ ನಗರ ಘಟಕದ ಅಧ್ಯಕ್ಷರು ಯು.ಕೋದಂಡರಾಮು, ಉಪಾಧ್ಯಕ್ಷರು ಪ್ರಧಾನ ಕಾರ್ಯದರ್ಶಿಗಳು ಸರ್ವ ಪದಾಧಿಕಾರಿಗಳು ಉಪ್ಪಾರ್ ಸಂಘದ ಸದಸ್ಯರು ನಗರಸಭಾ ಪೌರಾಯುಕ್ತ ಗಂಗಾಧರ, ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಪವನ್ ಕುಮಾರ್ ಎಸ್. ದಂಡಪ್ಪನವರ್, ಡಿ ವೈ ಎಸ್ ಪಿ ಮಾಲತೇಶ್ ಕೂನಬೇವ, ಕೃಷಿ ಇಲಾಖೆ ತೋಟಗಾರಿಕೆ ಇಲಾಖೆ ಅಬಕಾರಿ ಇಲಾಖೆ ಪಶು ಸಂಗೋಪನ ಇಲಾಖೆ ಆರೋಗ್ಯ ಇಲಾಖೆ ಶಿಕ್ಷಣ ಇಲಾಖೆ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಉಪ್ಪಾರ್ ಸಂಘದ ಮುಖಂಡರು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಪತ್ರಿಕ ಮಾಧ್ಯಮ ಮಿತ್ರರು ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಾರ್ವಜನಿಕರು ಇದ್ದರು ಬಳ್ಳಾರಿ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಉಪನ್ಯಾಸಕರಾದ ಡಾ ಯು ಶ್ರೀನಿವಾಸಮೂರ್ತಿ ಅವರು ಮುಖ್ಯ ಭಾಷಣಕಾರರಾಗಿ ಮಹರ್ಷಿ ಶ್ರೀ ಭಗೀರಥ ಅವರ ಜೀವನ ಚರಿತ್ರೆ ಕುರಿತು ಉಪನ್ಯಾಸ ನೀಡಿದರು

ಹರಿದಾಸ ಸಾಹಿತ್ಯಕ್ಕೆ ವಿಶಿಷ್ಟ ಶ್ರೇಷ್ಠ ಕೊಡುಗೆ ನೀಡಿದವರು ಶ್ರೀಶೇಷ ದಾಸರು -ಮುರಳಿಧರ ಕುಲಕರ್ಣಿ

ಗದ್ವಾಲ ಸಂಸ್ಥಾನ ರಾಜನಿಂದ ಅವಮಾನಿತ ಗೊಂಡು, ಜೀವನದಲ್ಲಿ ಜಿಗುಪ್ಸೆ ಹೊಂದಿ ಆತ್ಮಹತ್ಯೆ ಮಾಡಿಕೊಳ್ಳಲು ಹೋದಂತ ಶೇಷಪ್ಪನವರು ಚಿಂತ್ರವಲ್ಲಿಯ ಪ್ರಾಣದೇವರ ಸೇವೆಯನ್ನು ಮಾಡಿ ಶ್ರೀ ವಿಜಯದಾಸರ ಅನುಗ್ರಹದಿಂದ ಶೇಷ ದಾಸರಾಗಿ ದಾಸ ಸಾಹಿತ್ಯಕ್ಕೆ ವಿಶೇಷ ಶ್ರೇಷ್ಠ ಕೊಡುಗೆ ನೀಡಿದ ಮಹನೀಯರಾಗಿದ್ದಾರೆ ಎಂದು ಶ್ರುತಿ ಸಾಹಿತ್ಯ ಮೇಳದ ಅಧ್ಯಕ್ಷ ಮುರಳಿಧರ ಕುಲಕರ್ಣಿ ಅವರು ಹೇಳಿದರು.

ಅವರು ನಿನ್ನೆ ದಾಸ ಶ್ರೇಷ್ಠರಾದ ಶ್ರೀ ಶೇಷ ದಾಸರ 208ನೆಯ ಆರಾಧನೆಯ ಪ್ರಯುಕ್ತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.



ಶ್ರೀಶೇಷ ದಾಸರು 43 ಸುಳಾದಿಗಳನ್ನು, 14 ಉಗಾ ಭೋಗ ಗಳನ್ನು, 4 ಪದ್ಯಗಳನ್ನು, ಪಂಚ ಪ್ರಮೇಯಗಳನ್ನು ,ಗದ್ಯ ಗಳನ್ನು ,ಶ್ರೀ ವಿಜಯರಾಯರ ಚಕ್ರಾಬ್ಜ ಮಂಡಲ ವಿವರವನ್ನು ರಚಿಸಿದ್ದಾರೆ. ಇವುಗಳಲ್ಲಿ ಪ್ರಾರ್ಥನಾ ಸುಳಾದಿ, ಜ್ಞಾನ ಯಜ್ಞ ಸುಳಾದಿ,ವಾರದ ಸುಳಾದಿ, ಶ್ರೀ ಲಕ್ಷ್ಮೀದೇವಿ ,ಸುಳಾದಿ ಮುಂತಾದವುಗಳೆಲ್ಲ ತುಂಬಾ ಪ್ರಸಿದ್ಧಿಯನ್ನು ಪಡೆದಿವೆ, ಎಂದು ಹೇಳಿದರು.

ಈ ಸಂದರ್ಭದಲ್ಲಿ ಪತ್ರಕರ್ತ ಜಯಕುಮಾರ್ ದೇಸಾಯಿ ಯವರು ಮಾತನಾಡಿ, ದೈವಾಂಶ ಸಂಭೂತರಾದ ಶ್ರೀ ಶೇಷ ದಾಸರು ಜನಸಾಮಾನ್ಯರಿಗೆ ಸನ್ಮಾರ್ಗದ ಹಾದಿ ತೋರಿಸುವ ಕಾರ್ಯವನ್ನು ಮಾಡಿದರು ಅದರ ಜೊತೆಗೆ ಹಲವಾರು ಪವಾಡಗಳನ್ನು ಸಹ ಮಾಡಿ ಮಧ್ವಸಿದ್ಧಾಂತವನ್ನು ಪ್ರಚುರಪಡಿಸಿದರು. ಶ್ರೀ ವಿಜಯದಾಸರಿಂದ ಸ್ವಪ್ನದಲ್ಲಿ

ಶ್ರೀ ಗುರು ವಿಜಯ ವಿಠಲ ಎಂಬ ಅಂಕಿತವನ್ನು ಪಡೆದುಕೊಂಡು ಹಲವಾರು



ಮೌಲ್ಯಯುಕ್ತ ಕೃತಿಗಳನ್ನು ರಚಿಸಿದರು, ಎಂದು ಹೇಳಿದರು.

ಕಾರ್ಯಕ್ರಮವನ್ನು ಮಂತ್ರಾಲಯ ಮಠದ ವಿಭಾಗಿಯ ವ್ಯವಸ್ಥಾಪಕರಾದ

ಶ್ರೀ ಸೇತು ಮಾಧವ ಕನಕವೀಡು ಅವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ಶ್ರೀ ಶೇಷ ದಾಸರ ಸಂಕೀರ್ತನೆಗಳನ್ನು ಹಾಡುವರ ಮೂಲಕ ಹಿರಿಯ ಕಲಾವಿದ ಶ್ರೀ ಸುರೇಶ್ ಕಲ್ಲೂರ್ ಅವರು ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು.

ಬಯಲು ಆಂಜನೇಯ ದೇವಸ್ಥಾನದ ಅರ್ಚಕರಾದ ಶ್ರೀ ಶ್ರೀಧರಾಚಾರ್ಯ ಮುಂಗಲಿ ಅವರು

ಶ್ರೀ ಶೇಷ ದಾಸರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿ ಮಂಗಳಾರತಿಯನ್ನು ಮಾಡಿದರು.

ಈ ಸಂದರ್ಭದಲ್ಲಿ ವೆಂಕಟೇಶ ಕೋಲ್ಹಾರ್, ಮಾರುತಿ ಭಜನಾ ಮಂಡಳಿ, ಹಿರಿಯ ಕಲಾವಿದ

ಶ್ರೀ ಸುರೇಶ್ ಕಲ್ಲೂರ್, ಕುಮಾರಿ ವಾಸುಕಿರಣಂ, ಇವರಿಂದ ದಾಸವಾಣಿ ಜರುಗಿತು.

ಕಾರ್ಯಕ್ರಮದಲ್ಲಿ ಪ್ರಸನ್ನ ಆಲಂಪಲ್ಲಿ, ಕೃಷ್ಣಮೂರ್ತಿ ಹುಣಸಿಗಿ, ಕೇಶರಾವ ಕುಲ್ಕರ್ಣಿ, ಪಾಂಡುರಂಗ ದೇಸಾಯಿ,ಶ್ರೀಮತಿ ನಾಗರತ್ನ ಕಲ್ಲೂರ್, ಶ್ರೀಮತಿ ಪ್ರತಿಭಾ ಕುಲಕರ್ಣಿ ಮುಂತಾದವರು ಉಪಸ್ಥಿತರಿದ್ದರು.

ಕೊನೆಯಲ್ಲಿ ಭಜನಾ ಮಂಡಳಿಗಳಿಂದ ಶ್ರೀಶೇಷ ದಾಸರು ರಚಿಸಿದ ಸಂಕೀರ್ತನೆಗಳು ಜರಗಿದವು

ಸಿರುಗುಪ್ಪ : ತಾಲೂಕು ಎಸ್ ಎಸ್ ಎಲ್ ಸಿ ಶೇ, 94 ಫಲಿತಾಂಶ ಗಣನೀಯ ಪ್ರಗತಿ ಬಳ್ಳಾರಿ ಜಿಲ್ಲೆಗೆ ದ್ವಿತೀಯ ಸ್ಥಾನ ಬಿಇಓ ಗುರಪ್ಪ

ಸಿರುಗುಪ್ಪ – 2025 26 ನೇ ಸಾಲಿನ ಎಸ್ ಎಸ್ ಎಲ್ ಸಿ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಿದೆ ಅಲ್ಲದೆ 15 ಶಾಲೆಗಳು ಶೇ. 100 ಫಲಿತಾಂಶ ಪಡೆದಿದ್ದು ಒಟ್ಟಾರೆ ಸಿರುಗುಪ್ಪ ತಾಲೂಕು ಶೇ.93.99 ಫಲಿತಾಂಶ ಪಡೆಯುವ ಮೂಲಕ ಬಳ್ಳಾರಿ ಜಿಲ್ಲೆಯಲ್ಲಿ ಗಣನೀಯ



ಪ್ರಗತಿ ದ್ವಿತೀಯ ಸ್ಥಾನ ಪಡೆದಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್ ಗುರಪ್ಪ ಹೇಳಿದರು ಸಿರುಗುಪ್ಪ ತಾಲೂಕಿನಲ್ಲಿ ಒಟ್ಟು 61 ಪ್ರೌಢಶಾಲೆಗಳಿವೆ 3 613 ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ 3379 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಗ್ರಾಮೀಣ ಪ್ರದೇಶದ ಸರ್ಕಾರಿ ಪ್ರೌಢ ಶಾಲೆಗಳು ಕರೂರು ಗ್ರಾಮದ ಬಿ ಆರ್ ಅಂಬೇಡ್ಕರ್ ವಸತಿ ಶಾಲೆ ನಡವಿ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಮುರಾರ್ಜಿ ದೇಸಾಯಿ ವಸತಿ ಕೆಂಚನಗುಡ್ಡ ಗ್ರಾಮದ ಹಾಗೂ ಬಗ್ಗೂರು ಗ್ರಾಮದ ಮುರಾರ್ಜಿ ದೇಸಾಯಿ ವಸತಿ ಶಾಲೆ ಸೇರಿದಂತೆ ಖಾಸಗಿ ಅನುದಾನ ರಹಿತ ಐದು ಶಾಲೆಗಳು ಪೂರ್ಣ ಫಲಿತಾಂಶ ಸಾಧಿಸಿವೆ ಎಂದರು ನಡವಿ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ನಯನ ಶ್ರೀ ಶೇಕಡ 98.24 ಉಪ್ಪಾರ ಮಹಾಲಕ್ಷ್ಮಿ ಶೇಕಡ 98.08 ಮಾಟಸೂಗೂರು ಸರ್ಕಾರಿ ಪ್ರೌಢಶಾಲೆಯ ಭುವನೇಶ್ವರಿ ಶೇಕಡ 97.76 ಹಾಗೂ ಕರೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಪಿ ರವಿಕುಮಾರ್ ಶೇ. 97.76 ಅಂಕ ಪಡೆದು ಕ್ರಮವಾಗಿ ಪ್ರಥಮ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ.

ಸಿರುಗುಪ್ಪ ತಾಲೂಕಿನ ಸರ್ಕಾರಿ ಹಾಗೂ ವಸತಿ ಶಾಲೆಗಳು 2025 26 ನೇ ಸಾಲಿನ ಎಸ್ ಎಸ್ ಎಲ್ ಸಿ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಿವೆ ಮಣ್ಣೂರು ಸೂಗೂರು ಬಲಕುಂದಿ ಹೆರಕಲ್ಲು ಶಾನವಾಸ ಪುರ ಗ್ರಾಮಗಳ ಸರ್ಕಾರಿ ಪ್ರೌಢಶಾಲೆಗಳು ಹಾಗೂ ಕರೂರು ಗ್ರಾಮದ ಡಾ ಬಿ ಆರ್ ಅಂಬೇಡ್ಕರ್ ವಸತಿ ಶಾಲೆ ನಡವಿ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಮುರಾರ್ಜಿ ದೇಸಾಯಿ ವಸತಿ ಶಾಲೆ ಕೆಂಚನಗುಡ್ಡ ಗ್ರಾಮ ಹಾಗೂ ಬಗ್ಗೂರು ಗ್ರಾಮದ ಮುರಾರ್ಜಿ ದೇಸಾಯಿ ವಸತಿ ಶಾಲೆ ಶೇಕಡ 100ರಷ್ಟು ಫಲಿತಾಂಶ ಸಾಧಿಸಿವೆ ಈ ಸಾಧನೆಗೆ ಕಾರಣರಾದ ಪ್ರಚಾರ್ಯರು ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್ ಗುರ್ರಪ್ಪ ಕ್ಷೇತ್ರ ಸಮನ್ವಯಾಧಿಕಾರಿ ತಮ್ಮನಗೌಡ ಪಾಟೀಲ್ ಶಿಕ್ಷಣ ಇಲಾಖೆಯ ಅಧಿಕಾರಿಗಳು ರಾಷ್ಟ್ರೀಯ ಸಾಕ್ಷರತಾ ಲೋಕ ಶಿಕ್ಷಣ ನಿರ್ದೇಶನಾಲಯ ಸಾಮಾಜಿಕ ಕಾರ್ಯಕರ್ತ ಅಬ್ದುಲ್ ನಬಿ ಅವರು ಶುಭ ಹಾರೈಸಿ ಅಭಿನಂದಿಸಿದ್ದಾರೆ .

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

"ಅಲ್ಪ ಶಿಕ್ಷಣ ಅಥವಾ ವಿಫಲತೆಯಿದ್ದರೂ ಜೀವನದಲ್ಲಿ ಯಶಸ್ಸು"

ಜೀವನದಲ್ಲಿ ಯಶಸ್ಸು ಪಡೆಯಲು ಕೇವಲ ಶಿಕ್ಷಣವೇ ಒಂದೇ ಮಾರ್ಗವಲ್ಲ,
ಅನೇಕರು ಕಡಿಮೆ ಶಿಕ್ಷಣ ಪಡೆದವರಾಗಿರುತ್ತಾರೆ ಅಥವಾ ಮಧ್ಯದಲ್ಲೇ ಓದನ್ನು ಬಿಟ್ಟುಬಿಡುತ್ತಾರೆ,
ಆದರೂ ಅವರು ತಮ್ಮ ಜೀವನದಲ್ಲಿ ದೊಡ್ಡ ಯಶಸ್ಸು ಸಾಧಿಸುತ್ತಾರೆ,
ಇದರ ಪ್ರಮುಖ ಕಾರಣ ಅವರ ಪರಿಶ್ರಮ, ನಿಷ್ಠೆ ಮತ್ತು ಆತ್ಮವಿಶ್ವಾಸವಾಗಿದೆ,
ಇತಿಹಾಸದಲ್ಲಿ ಇಂತಹ ಅನೇಕ ಉದಾಹರಣೆಗಳು ಕಂಡುಬರುತ್ತವೆ.
ಧೀರೂಭಾಯಿ ಅಂಬಾನಿ ಅವರು ಬಹಳ ಕಡಿಮೆ ಓದಿದ್ದರು।
ಆದರೂ ಅವರು ಸಣ್ಣ ವ್ಯವಹಾರದಿಂದ ಆರಂಭಿಸಿ ದೊಡ್ಡ ಉದ್ಯಮವನ್ನು ನಿರ್ಮಿಸಿದರು।
ಇಂದು ಅವರು ವಿಶ್ವದ ಯಶಸ್ವಿ ಉದ್ಯಮಿಗಳಲ್ಲಿ ಒಬ್ಬರಾಗಿದ್ದಾರೆ.
ಅದೇ ರೀತಿ ಸಚಿನ್ ತೆಂಡೂಲ್ಕರ್ ಅವರು ಓದಿಗಿಂತ ಕ್ರಿಕೆಟ್‌ಗೆ ಹೆಚ್ಚು ಮಹತ್ವ ನೀಡಿದರು।
ಅವರ ಪರಿಶ್ರಮದಿಂದ ಅವರು ಮಹಾನ್ ಆಟಗಾರರಾದರು.
ರಜನಿಕಾಂತ್ ಅವರು ಮೊದಲಿಗೆ ಬಸ್ ಕಂಡಕ್ಟರ್ ಆಗಿದ್ದರು।
ಹೆಚ್ಚು ಶಿಕ್ಷಣ ಇಲ್ಲದಿದ್ದರೂ ತಮ್ಮ ಪ್ರತಿಭೆಯಿಂದ ಸಿನಿರಂಗದಲ್ಲಿ ದೊಡ್ಡ ಹೆಸರು ಮಾಡಿದರು.
ಬಿಲ್ ಗೇಟ್ಸ್ ಅವರು ಕಾಲೇಜನ್ನು ಮಧ್ಯದಲ್ಲೇ ಬಿಟ್ಟರು.
ಆದರೂ ತಮ್ಮ ಪರಿಶ್ರಮದಿಂದ ವಿಶ್ವದ ಅತ್ಯಂತ ಯಶಸ್ವಿ ವ್ಯಕ್ತಿಗಳಲ್ಲಿ ಒಬ್ಬರಾದರು.
ಸ್ಟೀವ್ ಜಾಬ್ಸ್ ಅವರು ಕೂಡ ಓದನ್ನು ಪೂರ್ಣಗೊಳಿಸಲಿಲ್ಲ।
ಆದರೂ ಆಪಲ್ ಎಂಬ ದೊಡ್ಡ ಕಂಪನಿಯನ್ನು ಸ್ಥಾಪಿಸಿದರು.
ಮಾರ್ಕ್ ಜೋಕರ್ ಬರ್ಗ್ ಅವರು ಓದನ್ನು ಬಿಟ್ಟು ಫೇಸ್ ಬುಕ್ ಅನ್ನು ಪ್ರಾರಂಭಿಸಿದರು.
ಇಂದು ಅವರು ಯುವ ಉದ್ಯಮಿಗಳಲ್ಲಿ ಪ್ರಮುಖರಾಗಿದ್ದಾರೆ.
ಮೇರಿ ಕೋಮ್ ಅವರು ಬಡ ಕುಟುಂಬದಿಂದ ಬಂದವರು।
ಕಷ್ಟಪಟ್ಟು ವಿಶ್ವ ಚಾಂಪಿಯನ್ ಆಗಿದರು.
ಕಪಿಲ್ ದೇವ್ ಅವರು ಓದಿಗಿಂತ ಕ್ರಿಕೆಟ್‌ಗೆ ಹೆಚ್ಚು ಗಮನ ನೀಡಿದರು।
ಭಾರತಕ್ಕೆ ವಿಶ್ವಕಪ್ ಗೆಲುವು ತಂದುಕೊಟ್ಟರು,
ಈ ಎಲ್ಲ ಉದಾಹರಣೆಗಳಿಂದ ಯಶಸ್ಸು ಕೇವಲ ಪದವಿಯ ಮೇಲೆ ಅವಲಂಬಿತವಲ್ಲ ಎಂಬುದು ಸ್ಪಷ್ಟವಾಗುತ್ತದೆ,
ಇದು ವ್ಯಕ್ತಿಯ ಪರಿಶ್ರಮ ಮತ್ತು ಮನೋಭಾವದ ಮೇಲೆ ಅವಲಂಬಿತವಾಗಿದೆ,
ಅನೇಕ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ವಿಫಲರಾಗುತ್ತಾರೆ,
ಕೆಲವರು ಶಾಲೆಯನ್ನೇ ಬಿಟ್ಟುಬಿಡುತ್ತಾರೆ,
ಆದರೆ ಅದರಿಂದ ಅವರ ಭವಿಷ್ಯ ಮುಗಿದಂತಲ್ಲ,
ವಿಫಲತೆ ಜೀವನದ ಒಂದು ಭಾಗವಾಗಿದೆ,
ಇದು ನಮಗೆ ಕಲಿಯಲು ಮತ್ತು ಮುಂದೆ ಸಾಗಲು ಸಹಾಯ ಮಾಡುತ್ತದೆ,
ಪ್ರತಿ ವ್ಯಕ್ತಿಯಲ್ಲೂ ಒಂದೊಂದು ವಿಶೇಷ ಪ್ರತಿಭೆ ಇರುತ್ತದೆ.
ಇಂದಿನ ಕಾಲದಲ್ಲಿ ಕ್ರೀಡೆ, ಕಲೆ, ವ್ಯವಹಾರ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಯಶಸ್ಸು ಪಡೆಯಬಹುದು,
ಪರಿಶ್ರಮ ಮತ್ತು ಶಿಸ್ತಿನಿಂದ ಯಾರಾದರೂ ಯಶಸ್ಸು ಸಾಧಿಸಬಹುದು.
" ಮತ್ತು ನಂತರ ವಿದ್ಯಾರ್ಥಿಗಳ ಸರಿಯಾದ ಮಾರ್ಗ"
ಮತ್ತು ವಿದ್ಯಾರ್ಥಿಗಳ ಜೀವನದ ಪ್ರಮುಖ ಹಂತಗಳಾಗಿವೆ
ಈ ಪರೀಕ್ಷೆಗಳ ನಂತರ ವಿದ್ಯಾರ್ಥಿಗಳಲ್ಲಿ "ಮುಂದೇನು?" ಎಂಬ ಪ್ರಶ್ನೆ ಬರುತ್ತದೆ
ಸರಿಯಾದ ನಿರ್ಧಾರ ಭವಿಷ್ಯವನ್ನು ನಿರ್ಮಿಸುತ್ತದೆ.
ಮೊದಲಿಗೆ ವಿದ್ಯಾರ್ಥಿಗಳು ತಮ್ಮ ಆಸಕ್ತಿ ಮತ್ತು ಸಾಮರ್ಥ್ಯವನ್ನು ತಿಳಿದುಕೊಳ್ಳಬೇಕು.
ಇತರರನ್ನು ನೋಡಿ ನಿರ್ಧಾರ ತೆಗೆದುಕೊಳ್ಳುವುದು ತಪ್ಪಾಗಿದೆ
ತಮ್ಮ ಆಸಕ್ತಿಯ ಪ್ರಕಾರವೇ ಕ್ಷೇತ್ರವನ್ನು ಆಯ್ಕೆ ಮಾಡಬೇಕು.
★ ವಿಜ್ಞಾನದಲ್ಲಿ ಆಸಕ್ತಿ ಇದ್ದರೆ ಇಂಜಿನಿಯರಿಂಗ್, ವೈದ್ಯಕೀಯ, ಫಾರ್ಮಸಿ ಅಥವಾ ಸಂಶೋಧನೆ ಕ್ಷೇತ್ರಗಳಲ್ಲಿ ಹೋಗಬಹುದು.
★ ವಾಣಿಜ್ಯದಲ್ಲಿ ಆಸಕ್ತಿ ಇದ್ದರೆ , ಬ್ಯಾಂಕಿಂಗ್, ವ್ಯವಹಾರ ಅಥವಾ ಲೆಕ್ಕಪತ್ರ ಕ್ಷೇತ್ರದಲ್ಲಿ ಮುಂದೆ ಸಾಗಬಹುದು.
★ ಕಲಾ ವಿಭಾಗದವರು ಶಿಕ್ಷಕ, ಪತ್ರಕರ್ತ, ಆಡಳಿತ ಸೇವೆ ಅಥವಾ ಸಮಾಜ ಸೇವೆಯಲ್ಲಿ ಯಶಸ್ಸು ಪಡೆಯಬಹುದು.
ಇಂದಿನ ಕಾಲದಲ್ಲಿ ಕೌಶಲ್ಯಗಳಿಗೆ () ಹೆಚ್ಚಿನ ಮಹತ್ವವಿದೆ।
ಕಂಪ್ಯೂಟರ್ ಜ್ಞಾನ, ಇಂಗ್ಲಿಷ್, ಸಂವಹನ ಕೌಶಲ್ಯ ಮತ್ತು ತಾಂತ್ರಿಕ ಕೌಶಲ್ಯಗಳು
ಡಿಜಿಟಲ್ ಮಾರ್ಕೆಟಿಂಗ್, ಗ್ರಾಫಿಕ್ ಡಿಸೈನ್, ಟ್ಯಾಲಿ, ಪ್ರೋಗ್ರಾಮಿಂಗ್ ಮುಂತ[illegible]ು ಉತ್ತಮ,



ಯಶಸ್ಸು ಒಂದು ದಿನದಲ್ಲಿ ಸಿಗುವುದಿಲ್ಲ
ಪರಿಶ್ರಮ, ಸಹನೆ ಮತ್ತು ನಿರಂತರ ಪ್ರಯತ್ನ ಅಗತ್ಯ
ವಿಫಲತೆ ಬಂದರೂ ನಿರಾಶರಾಗದೆ ಮುಂದೆ ಸಾಗಬೇಕು
ಕೊನೆಯಲ್ಲಿ, ಮತ್ತು ನಂತರ ಅನೇಕ ಅವಕಾಶಗಳಿವೆ
ಸರಿಯಾದ ಗುರಿ, ಪರಿಶ್ರಮ ಮತ್ತು ದೃಢನಿಶ್ಚಯದಿಂದ ವಿದ್ಯಾರ್ಥಿಗಳು
ತಮ್ಮ ಜೀವನದಲ್ಲಿ ದೊಡ್ಡ ಯಶಸ್ಸು ಸಾಧಿಸಬಹುದು.
ನೂರುದ್ದೀನ್ ಉಪನ್ಯಾಸಕರು

ಅರ್ಥಪೂರ್ಣ ಉಪನ್ಯಾಸ ಡಾ ಬಿರಾದಾರ ಗೆ ಸನ್ಮಾನ



ರಾಯಚೂರು,ಏ.25-

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಮಹಾನಗರ ಪಾಲಿಕೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ರಾಯಚೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ನಟ ಸಾರ್ವಭೌಮ. ಕನ್ನಡ ಚಲನಚಿತ್ರದ ದಿಗ್ಗಜ. ಕನ್ನಡಿಗರ ಕಣ್ಮಣಿ. ಕರ್ನಾಟಕ ರತ್ನ ಡಾ. ರಾಜಕುಮಾರ್ ಅವರ ಜಯಂತಿಯ ಕಾರ್ಯಕ್ರಮದಲ್ಲಿ ಅರ್ಥಪೂರ್ಣವಾದ ಉಪನ್ಯಾಸ ನೀಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಹಾಗೂ ಡಾ. ರಾಜಕುಮಾರ್ ರಾಜ್ಯಮಟ್ಟದ ಸದ್ಭಾವನ ಪ್ರಶಸ್ತಿ ಪುರಸ್ಕೃತರಾದ ಡಾ. ದಂಡಪ್ಪ ಬಿರಾದಾರ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು . ಈ ಸಂದರ್ಭದಲ್ಲಿ ರಾಯಚೂರು ತಹಸಿಲ್ದಾರ್ ಸುರೇಶ್ ವರ್ಮ ರಾಯಚೂರು ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘದ ಅಧ್ಯಕ್ಷರಾದ ಗುರುನಾಥ್.ಜಿಲ್ಲಾ ವಾರ್ತಾ ಅಧಿಕಾರಿ ಡಾ. ಜಿ ಸುರೇಶ್.ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಪ್ರತಿಭಾ ಗೋನಾಳ್.ಮಹಿಳಾ ಮುಖಂಡರಾದ ನಿರ್ಮಲ ಬೆಣ್ಣೆ.ಪಿ ಸುರೇಖಾ.ರಾಜಕುಮಾರ್ ಅಭಿಮಾನಿಗಳ ಸಂಘದ ಪದಾಧಿಕಾರಿಗಳಾದ ಬಸವರಾಜ್ ಮೈತ್ರಿಕರ್ ವಿಧಾನ ಪರಿಷತ್ತಿನ ಸದಸ್ಯರ ಆಪ್ತ ಕಾರ್ಯದರ್ಶಿ ಚೆನ್ನರೆಡ್ಡಿ ಬಿರಾದಾರ ವೆಂಕಟೇಶ್ವರ ಕಾಲೇಜಿನ ಪ್ರಾಚಾರ್ಯರ ಶ್ರೀ ನರಸಿಂಹ ಸಾಗರ್.ಜೂನಿಯರ್ ರಾಜಕುಮಾರ್ ಗುರುದೇವ ಅರಿಕೇರ ಸೇರದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೂರು ತೊಲೆ ಬಂಗಾರ ಹಾರಿಸಿದ ಕಳ್ಳರು

ಗಂಗಾವತಿ: ಬಸ್ ಹತ್ತುವಾಗ ಮೂರು ತೊಲೆ ಬಂಗಾರ ಹಾರಿಸಿದ ಕಳ್ಳರು ಘಟನೆಯಲ್ಲಿ ಸುಮಾರು ನಾಲ್ಕೂವರೆ ಲಕ್ಷ ರೂಪಾಯಿ ಮೊತ್ತದ ಚಿನ್ನಾಭರಣಗಳನ್ನು ಕಳೆದುಕೊಂಡ ಮಹಿಳೆಯನ್ನು ಗದಗ ಶಹರದ ನಿವಾಸಿ ರಿಜೀಯಾಬೇಗಂ ಅಲಿಯಾಸ್ ಮುಸ್ತಾನಬೇಗಂ ದಾವಲ್ಸಾ ಬ ಎಂದು ಗುರುತಿಸಲಾಗಿದೆ.

ಈ ಮಹಿಳೆಯು, ಗಂಗಾವತಿಯ ಹಿರೇಜಂತಕಲ್‌ನಲ್ಲಿರುವ ತನ್ನ ಸಹೋದರನ ಮಗನ (ಸಹೋದರ ಅಳಿಯ) ಮದುವೆ ಕಾರ್ಯಕ್ರಮಕ್ಕೆ ಬಂದಿದ್ದರು. ಮದುವೆ ಮುಗಿಸಿಕೊಂಡು ಹೋಗುವ ಸಂದರ್ಭದಲ್ಲಿ ವಾಹನದಲ್ಲಿ ಪ್ರಯಾಣಿಕರಿಂದ ದಟ್ಟಣೆ ಇತ್ತು. ಜನರ ದಟ್ಟಣೆಯನ್ನೇ ಬಂಡವಾಳ ಮಾಡಿಕೊಂಡ ಕಳ್ಳರು, ಕತ್ತರಿ ಪ್ರಯೋಗ ಮಾಡಿ ಸುಮಾರು ಮೂರು ತೊಲೆ ಬಂಗಾದರ ಆಭರಣ ಕದ್ದು ಪರಾರಿಯಾಗಿದ್ದಾರೆ. ಈ ಸಂಬಂಧ ಗಂಗಾವತಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಶೋಧನೆ ಮಾಡುತ್ತಿದ್ದಾರೆ.

ಸಿಸಿ ಕ್ಯಾಮರಾ, ಸಿಬ್ಬಂದಿ ಕೊರತೆ: ಇಲ್ಲಿನ ಕೇಂದ್ರ ಬಸ್ ನಿಲ್ದಾಣಕ್ಕೆ ನಿತ್ಯ ಸುಮಾರು ನಾಲ್ಕು ನೂರಕ್ಕೂ ಹೆಚ್ಚು ವಾಹನಗಳ ಸಂಚಾರವಿದೆ. ಸುಮಾರು ಐದು ಸಾವಿರಕ್ಕೂ ಹೆಚ್ಚು ಪ್ರಯಾಣಿಕರ ಓಡಾಟವಿದೆ. ಇಂತಹ ದಟ್ಟಣೆ ಇರುವ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಯಾವುದೇ ಭದ್ರತೆ, ರಕ್ಷಣೆ ಇಲ್ಲವಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಡಿಸ್ಕ್ಲೈಮರ್:-ಈ ಪತ್ರಿಕೆಯಲ್ಲಿ ಪ್ರಕಟವಾಗುವ ಸುದ್ದಿ, ಅಭಿಪ್ರಾಯಗಳು, ಚಿತ್ರಗಳು ಹಾಗೂ ಮಾಹಿತಿಗಳು ವಿಶ್ವಾಸಾರ್ಹ ಮೂಲಗಳ ಆಧಾರದ ಮೇಲೆ ಸಾರ್ವಜನಿಕ ಹಿತಾಸಕ್ತಿ ಮತ್ತು ಜಾಗೃತಿಗಾಗಿ ಮಾತ್ರ ಪ್ರಕಟಿಸಲ್ಪಟ್ಟಿವೆ. ಯಾವುದೇ ವ್ಯಕ್ತಿ, ಸಂಸ್ಥೆ ಅಥವಾ ಸಮುದಾಯವನ್ನು ಅವಹೇಳನಗೊಳಿಸುವ, ಅವಮಾನ ಮಾಡುವ ಅಥವಾ ಖಾಸಗಿ ಹಕ್ಕಿಗೆ ಧಕ್ಕೆ ತರುವ ಉದ್ದೇಶ ಇಲ್ಲ.



ಗೆದ್ದೆನೆಂದು ಹಿಗ್ಗಬೇಡ, ಸೋತೆನೆಂದು ಕುಗ್ಗಬೇಡ:

ಸಿರವಾರ: ಆಟದಲ್ಲಿ ಸೋಲು-ಗೆಲುವು ಸಹಜ. ಗೆದ್ದಾಗ ಅತಿಯಾಗಿ ಸಂಭ್ರಮಿಸದೆ ಮತ್ತು ಸೋತಾಗ ಕಂಗೆಡದೆ, ಕೇವಲ ಭಾಗವಹಿಸುವಿಕೆಯಲ್ಲಿ ಸಂತೋಷ ಕಾಣುವುದು ಕ್ರೀಡಾ ಮನೋಭಾವದ ಲಕ್ಷಣ, ಎಂದು ಸಾಮಾಜಿಕ ಕಾರ್ಯಕರ್ತ ರಮೇಶ್ ಭಂಡಾರಿ ಹೇಳಿದರು.

ರಾಯಚೂರು ಜಿಲ್ಲೆಯ ಸಿರವಾರ ತಾಲೂಕಿನ ಮಲ್ಲಟ್ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ 2025-26ನೇ ಸಾಲಿನ 6ನೇ ಸೀಸನ್ ಕ್ರಿಕೆಟ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಗ್ರಾಮೀಣ ಕ್ರೀಡೆಗಳಿಗೆ ಯುವಕರ ಸಾಥ್

ಮಲ್ಲಟ್ ಗ್ರಾಮದ ಯುವಕರು ಮತ್ತು ಗ್ರಾಮಸ್ಥರು ಸೇರಿ ಪ್ರತಿ ವರ್ಷದಂತೆ ಈ ವರ್ಷವೂ ಅತ್ಯಂತ ವ್ಯವಸ್ಥಿತವಾಗಿ ಪಂದ್ಯಾವಳಿಯನ್ನು ಆಯೋಜಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ರಮೇಶ್ ಭಂಡಾರಿಯವರು, ಕ್ರಿಕೆಟ್ ಆರೋಗ್ಯಕ್ಕೆ ಉತ್ತಮ ತಾಲೀಮು. ಪ್ರತಿಯೊಬ್ಬರ ಜೀವನದಲ್ಲಿ ಆಟ ಮತ್ತು ಪಾಠ ಎರಡೂ ಅತಿ ಮುಖ್ಯ. ಗ್ರಾಮೀಣ ಕ್ರೀಡೆಗಳನ್ನು ಆಡುವುದರ ಮೂಲಕ ಅವುಗಳನ್ನು ಜೀವಂತವಾಗಿಡುವ ಕೆಲಸವನ್ನು ಇಂದಿನ ಯುವಕರು ಮಾಡುತ್ತಿರುವುದು ಶ್ಲಾಘನೀಯ, ಎಂದರು.

ದಾನಿಗಳ ಉದಾರತೆ

ಈ ಬಾರಿಯ ಪಂದ್ಯಾವಳಿಗೆ ಗ್ರಾಮದ ಪ್ರಮುಖರು ಆರ್ಥಿಕ ನೆರವು ನೀಡುವ ಮೂಲಕ ಕ್ರೀಡಾ ಪ್ರೋತ್ಸಾಹ ನೀಡಿದರು:

ಪ್ರಥಮ ಬಹುಮಾನ: ₹30,000 ಮೊತ್ತವನ್ನು ಮಾಜಿ ತಾಲೂಕು ಪಂಚಾಯತಿ ಸದಸ್ಯರಾದ ಮಲ್ಲಿಕಾರ್ಜುನ್ ವಾಲ್ಮೀಕಿ ಅವರು ನೀಡಿದರು.

ದ್ವಿತೀಯ ಬಹುಮಾನ: ₹20,000 ಮೊತ್ತವನ್ನು ಮಾಜಿ ಗ್ರಾಮ ಪಂಚಾಯತಿ ಸದಸ್ಯರಾದ ರವಿಕುಮಾರ್ ಅವರು ನೀಡಿದರು.

ಊಟದ ವ್ಯವಸ್ಥೆ: ಪಂದ್ಯಾವಳಿಯಲ್ಲಿ ಭಾಗವಹಿಸಿದ ಆಟಗಾರರಿಗೆ ಮತ್ತು ವೀಕ್ಷಿಸಲು ಬಂದಿದ್ದ ಕ್ರೀಡಾಭಿಮಾನಿಗಳಿಗೆ ನಾಗರಾಜ್ ಕಂಬಾರ್ ಅವರು ಭೋಜನದ ವ್ಯವಸ್ಥೆ ಮಾಡಿದ್ದರು.

ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸಿದಾಗ ಮಾತ್ರ ಸಮಾಜದಲ್ಲಿ ಸಮಾನತೆ ಉಳಿಯಲು ಸಾಧ್ಯ. ಸೋತರೂ ಗೆದ್ದರೂ ಅದೊಂದು ಹೊಸ ಅನುಭವ ನೀಡುತ್ತದೆ, ಎಂದು ರಮೇಶ್ ಭಂಡಾರಿ ಆಟಗಾರರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದವರು

ಈ ಕ್ರೀಡಾಕೂಟದ ಸಂದರ್ಭದಲ್ಲಿ ರಂಗನಾಥ್, ನಾಗರಾಜ್ ಕಂಬಾರ್, ನಾಯಕ್ ರಾಜಪ್ಪ ಮಲ್ಲಟ್, ರಾಘವೇಂದ್ರ ನಾಯಕ್, ರವಿಕುಮಾರ್ ಚಲವಾದಿ, ಬಸಪ್ಪ ಗೌಡ, ನಾಗರಾಜ್ ನಾಯಕ್, ಉದಯ್ ಗೌಡ, ಆಂಜನೇಯ ನಾಯಕ್, ಮಲ್ಲು ಭಂಡಾರಿ ಹಾಗೂ ಗ್ರಾಮದ ಹಿರಿಯರು ಮತ್ತು ನೂರಾರು ಯುವಕರು ಉಪಸ್ಥಿತರಿದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಓದು, ಜ್ಞಾನ ಹಂಚಿಕೆಗೆ ಗ್ರಂಥಾಲಯಗಳು ಸಹಕಾರಿ : ಡಾ.ಎಸ್.ಎಲ್.ಕಾಡದೇವರಮಠ



ಕಲುಬುರ್ಗಿ,ಏ.25-

ಪ್ರಸ್ತುತ ಕಾಲಘಟ್ಟದಲ್ಲಿ ಗ್ರಂಥಾಲಯಗಳು ಕೇವಲ ಪುಸ್ತಕ ಸಂಗ್ರಹಾಲಯಗಳಾಗಿರದೆ, ತಂತ್ರಜ್ಞಾನದ ನೆರವಿನಿಂದ ಡಿಜಿಟಲ್ ಸಂಪನ್ಮೂಲ ಕೇಂದ್ರಗಳಾಗಿ ರೂಪಾಂತರಗೊಂಡಿವೆ. ಇವು ವಿದ್ಯಾರ್ಥಿಗಳ ಶೈಕ್ಷಣಿಕ ಗುರಿ ಸಾಧನೆ ಮತ್ತು ಬೌದ್ಧಿಕ ಬೆಳವಣಿಗೆಗೆ ಮಹತ್ವದ ವೇದಿಕೆಯಾಗಿವೆ ಎಂದು ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘದ ಅಧ್ಯಕ್ಷ ಡಾ. ಎಸ್.ಎಲ್. ಕಾಡದೇವರಮಠ ಹೇಳಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಓದುವ ಹವ್ಯಾಸ ಬೆಳೆಸುವುದು ಹಾಗೂ ಜ್ಞಾನ ಹಂಚಿಕೆಗೆ ಗ್ರಂಥಾಲಯಗಳು ಪ್ರಮುಖ ಪಾತ್ರವಹಿಸುತ್ತವೆ ಎಂದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘದ ಕಲಬುರಗಿ ಜಿಲ್ಲಾ ಘಟಕ ಉದ್ಘಾಟನೆ ಹಾಗೂ ಕಲ್ಯಾಣ ಕರ್ನಾಟಕ ಗ್ರಂಥಪಾಲಕರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಗ್ರಂಥಾಲಯಗಳು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಶೈಕ್ಷಣಿಕ ಬೆಳವಣಿಗೆಗೆ ಆಧಾರವಾಗಿದ್ದು, ರಾಜ್ಯದ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಗ್ರಂಥಪಾಲಕರ ಕೊರತೆ ಇದೆ. ಸುಮಾರು 2000 ಪದವಿ ಪೂರ್ವ ಕಾಲೇಜುಗಳಲ್ಲಿ ಕೇವಲ 90ರಲ್ಲಿ ಮಾತ್ರ ಗ್ರಂಥಪಾಲಕರಿದ್ದು, ಉಳಿದ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಗ್ರಂಥಪಾಲಕ ಡಾ. ಸುರೇಶ್ ಜಂಗೆ ಮಾತನಾಡಿ, ಗ್ರಂಥಾಲಯ ವೃತ್ತಿಪರರು ನವೀನ ತಂತ್ರಜ್ಞಾನ ಮತ್ತು ಕೌಶಲ್ಯಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳನ್ನು ಅಧ್ಯಯನದತ್ತ ಸೆಳೆಯಬೇಕು ಎಂದರು.

ನಿವೃತ್ತ ಪ್ರಾಧ್ಯಾಪಕ ಪ್ರೊ. ಡಿ.ಬಿ. ಪಾಟೀಲ್ ಮಾತನಾಡಿ, ಗ್ರಂಥಪಾಲಕರ ಕೌಶಲ್ಯಾಭಿವೃದ್ಧಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಾರ್ಯಾಗಾರಗಳು ಮತ್ತು ವಿಚಾರ ಸಂಕಿರಣಗಳನ್ನು ಆಯೋಜಿಸುವ ಅಗತ್ಯವಿದೆ ಎಂದು ಹೇಳಿದರು.

ಒಟ್ಟಾರೆ, ಗ್ರಂಥಾಲಯ ಕ್ಷೇತ್ರದಲ್ಲಿ ಆಧುನಿಕತೆ, ತಂತ್ರಜ್ಞಾನ ಮತ್ತು ಮಾನವ ಸಂಪನ್ಮೂಲಗಳ ಸಮನ್ವಯವೇ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಮುಖ್ಯ ಎನ್ನುವ ಸಂದೇಶ ಕಾರ್ಯಕ್ರಮದಿಂದ ವ್ಯಕ್ತವಾಯಿತು.

ಡಾ. ಪರಮಾನಂದ ಹಾಗದಗಿ ಅವರು ಗ್ರಂಥಪಾಲಕರ ಸಂಘ ಬೆಳೆದು ಬಂದ ದಾರಿ ಮತ್ತು ಸಮಸ್ಯೆ ಮತ್ತು ಸವಾಲುಗಳನ್ನು ವಿವರಿಸಿದರು.

ಕಲಬುರಗಿ ಜಿಲ್ಲಾ ಅಧ್ಯಾಯದ ನೂತನ ಅಧ್ಯಕ್ಷೆ ಡಾ. ಸಾವಿತ್ರಿ ಕೃಷ್ಣ ಮಾತನಾಡಿದರು.

ನಿವೃತ್ತ ಗ್ರಂಥಪಾಲಕ ಡಾ. ಗಣಪತಿ ಸಿಂಧೆ ಮತ್ತಿತರಿದ್ದರು. ಡಾ. ರಾಜಶ್ರೀ ಅತಿಥಿ ಗಣ್ಯರನ್ನು ಸ್ವಾಗತಿಸಿದರು. ಡಾ. ದಾನಪ್ಪವಗ್ಗಿ ನಿರೂಪಿಸಿದರು. ಡಾ. ಸಾವಿತ್ರಿ ಪಟ್ಟಣ ವಂದಿಸಿದರು.

ನೂತನ ಪದಾಧಿಕಾರಿಗಳ ಆಯ್ಕೆ: ಡಾ. ಸುರೇಶ ಜಂಗೆ (ಸಲಹೆಗಾರರು) ಡಾ. ಸಾವಿತ್ರಿ ಕೃಷ್ಣ (ಅಧ್ಯಕ್ಷರು). ಡಾ. ಗೌತಮಿ ಮತ್ತು ಡಾ ಫರಹೀನ (ಉಪಾಧ್ಯಕ್ಷರು), ಡಾ. ದಾನಪ್ಪವಗ್ಗಿ (ಕಾರ್ಯದರ್ಶಿ), ಡಾ. ಸಾವಿತ್ರಿ ಪಟ್ಟಣ (ಸಂಘಟನಾ ಕಾರ್ಯದರ್ಶಿ), ಡಾ ರಾಜಶ್ರೀ (ಖಜಾಂಚಿ), ಆಡಳಿತ ಮಂಡಳಿ ಸದಸ್ಯರಾಗಿ ಡಾ. ಅರವಿಂದ, ಡಾ ವಿನೋದಕುಮಾರ, ಡಾ ಸಯ್‌ದ್ ಸರಮತ್, ಡಾ ಪ್ರತಿಭಾ, ಡಾ. ನಾಗರಾಜ ಮತ್ತು ಶ್ರೀ ಭೀಮರೆಡ್ಡಿ ಅವರನ್ನು ಆಯ್ಕೆ ಮಾಡಲಾಯಿತು.

ಎಸ್ಸೆಸ್ಸೆಲ್ಸಿ ಯಲ್ಲಿ ಕಲ್ಯಾಣದ ಜಿಲ್ಲೆಗಳದ್ದು ಕಳೆದ ಶೈಕ್ಷಣಿಕ ವರ್ಷಕ್ಕಿಂತ ಈ ಬಾರಿ ಉತ್ತಮ ಸಾಧನೆ: ಡಾ. ಅಜಯ್ ಧರಂಸಿಂಗ್

ಕಲಬುರಗಿ:ಏ.24:ಕಲ್ಯಾಣ ನಾಡಿನ ಹೆಬ್ಬಾಗಿಲು ಕಲಬುರಗಿ ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿ ಕಳೆದ ಶೈಕ್ಷಣಿಕ ವರ್ಷಕ್ಕಿಂತ ಈ ಬಾರಿ ಉತ್ತಮ ಫಲಿತಾಂಶ ಬಂದಿದೆ, ಕಲಬುರಗಿ ಫಲಿತಾಂಶದಲ್ಲಿ ರಾಜ್ಯದಲ್ಲೇ ಕೊನೆಯ ಸ್ಥಾನದಲ್ಲಿರಬಹುದು, ಆದರೆ ಕಳೆದ ಬಾರಿಗೆ ಹೋಲಿಕೆ ಮಾಡಿದಲ್ಲಿ ತೇರ್ಗಡೆಯಾಗುವ ಮಕ್ಕಳ ಪ್ರಮಾಣ ಶೇಕಡಾವಾರು ಗಣನೀಯವಾಗಿ ಹೆಚ್ಚಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡಲು 2023-24ನೇ ವರ್ಷವನ್ನು''ಶಿಕ್ಷಣ ವರ್ಷ'' ಎಂದು ಘೋಷಣೆ ಮಾಡಿ ''ಅಕ್ಷರ ಅವಿಷ್ಕಾರ'' ಯೋಜನೆ ಜಾರಿಗೆ ತಂದುದರ ಪರಿಣಾಮ ನಿಧಾನಕ್ಕೆ ಫಲಿತಾಂಶದಲ್ಲಿ ಸುಧಾರಣೆ ಗೋಚರಿಸುತ್ತಿದೆ ಎಂದು ಕಲ್ಯಾಣ ಕರ್ಟಾಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ. ಅಜಯ್ ಧರ್ಮಸಿಂಗ್ ಹೇಳಿದ್ದಾರೆ.

ಎಸ್ಸೆಸ್ಸೆಲ್ಸಿ ಫಲಿತಾಂಶದ ಹಿನ್ನೆಲೆಯಲ್ಲಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕಳೆದ ವರ್ಷದ ಪಾಸಿಂಗ್ ಶೇಕಡಾವಾರು ಹೋಲಿಕೆ ಮಾಡಿದಲ್ಲಿ ಕಲ್ಯಾಣದ ಸಪ್ತ ಜಿಲ್ಲೆಗಳಲ್ಲಿ ಸುಧಾರಣೆ ಕಂಡಿದೆ. ಕಲಬುರಗಿ ಕಳೆದ ಬಾರಿ ಶೇ. 56. 89 ರಷ್ಟಿದ್ದರೆ ಈ ಬಾರಿ 85. 06 ಕ್ಕೇರಿದೆ. ಇನ್ನು ಬಳ್ಳಾರಿ ಶೇ. 79 ಇದ್ದದ್ದು, ಈ ಬಾರಿ ಶೇ. 93. 35 ಕ್ಕೆ, ಬೀದರ್ ಕಳೆದ ಬಾರಿ 73. 35 ಇದ್ದದ್ದು ಈ ಬಾರಿ ಶೇ. 92. 17 ಕ್ಕೆ ಹೆಚ್ಚಿದೆ.

ಇನ್ನು ಕೊಪ್ಪಳ ಕಳೆದ ಬಾರಿ 78. 93 ಇದ್ದದ್ದು ಈ ಬಾರಿ 93. 1 ರಷ್ಟಾಗಿದೆ, ರಾಯಚೂರು ಜಿಲ್ಲೆಯಲ್ಲಿಯೂ ಫಲಿತಾಂಶ ವೃದ್ಧಿಯಾಗಿದೆದ್ದು ಕಳೆದ ಬಾರಿ ಶೇ. 75 ಇದ್ದದ್ದು ಈ ಬಾರಿ ಶೇ. 94. 41 ಕ್ಕೆ ಹೆಚ್ಚಿದೆ. ವಿಜಯನಗರ ಕಳೆದ ಬಾರ ಶೇ. 86. 75 ಇದ್ದದ್ದು ಈ ಬಾರಿ ಶೇ. 96. 39 ಕ್ಕೆ ಹೆಚ್ಚಿದೆ, ಯಾದಗಿರಿ ಜಿಲ್ಲೆಯು ಕಲೆದ ಬಾರಿ ಶೇ. 62. 08 ರಷ್ಟಿತ್ತು, ಈ ಬಾರಿ ಪಾಸಿಂಗ್ ಶೇಕಡಾವಾರು ಶೇ. 91. 89 ರಷ್ಟು ದಾಖಲಾಗಿದೆ. ??ನ್ನೆಲ್ಲ ಸೂಕ್ಷ್ಮವಾಗಿ ನೋಡಿದಾಗ ಕಲ್ಯಾಣದ ಜಿಲ್ಲೆಗಳ ಒಟ್ಟಾರೆ ತೇರ್ಗಡೆಯಾಗುವ ಶೇಕಡಾವಾರು ಸಾಧನೆ ಹಿಗ್ಗುತ್ತ ಸಾಗಿದೆ. ಕೆಕೆಆರ್ಡಿಬಿ ಕಳೆದ 3 ವರ್ಷಗಳ ಹಿಂದೆ ಆರಂಭಿಸಿರುವ ಅಕ್ಷರ ಅವಿಷ್ಕಾರದ ಶೈಕ್ಷಣಿಕ ಕ್ರಾಂತಿಯ ಸಿಹಿಫಲ. ಇದು ಕಲ್ಯಾಣ ನಾಡಿನ ಎಸ್ಸೆ ಸ್ಸೆ ಲ್ಸಿ ರಂಗದಲ್ಲಿ ಕಂಡಿರುವ ಈಚೆಗಿನ ವರ್ಷಗಳಲ್ಲಿನ ಅತ್ಯುತ್ತಮ ಬೆಳವಣಿಗೆ ಎಂದು ಡಾ. ಅಜಯ್ ಧರಂಸಿಂಗ್ ಅಭಿಪ್ರಾಯಪಟ್ಟಿದ್ದಾರೆ.

ಕೆಕೆಆರ್ಡಿಬಿ ಇದೇ ಮೊದಲ ಬಾರಿಗೆ ಡಾ. ಛಾಯಾ ದೇಗಾಂವ್ಕರ್ ಅಧ್ಯಕ್ಷತೆಲ್ಲಿ ಶಿಕ್ಷಣ ತಜ್ಞರ ಸ,ಮಿತಿ ರಚಿಸಿ ಅವರಿಂದ ಸಮಗ್ರ ವರದಿ ಪಡೆದು ಈ ಬಾಗದ ಶಿಕ್ಷಣ ರಂಗದಲ್ಲಿ ಸುದಜಾರಣೆ ತರುವ ಪ್ರಾಮಾಣಿಕ ಪ್ರಯತ್ನ ಕೂಡಾ ಮಾಡಿದೆ.

ಮೂರು ವರ್ಷಗಳ ಈ ಅಂಕಿ ಅಂಶಗಳು ಒಂದು ಸತ್ಯವನ್ನು ಸಾರಿ ಹೇಳುತ್ತಿವೆ, ಕಲ್ಯಾಣ ಕರ್ನಾಟಕ ಈಗ ಕೇವಲ ನಿರೀಕ್ಷೆಯಲ್ಲಿ ಮಾತ್ರವಲ್ಲ, ಸಾಧನೆಯ ಹಾದಿಯಲ್ಲಿದೆ. ಬಳ್ಳಾರಿ, ವಿಜಯನಗರದ ಸ್ಥಿರತೆ ಹಾಗೂ ರಾಯಚೂರಿನ ವಿದ್ಯಾರ್ಥಿಯ ರಾಜ್ಯ ಮಟ್ಟದ ಸಾಧನೆ ಈ ಭಾಗದ ಮಕ್ಕಳ ಕನಸುಗಳಿಗೆ ರೆಕ್ಕೆ ನೀಡಿದೆ. ಕಲ್ಯಾಣ ಕರ್ನಾಟಕ ಬದಲಾಗುತ್ತಿದೆ, ಪ್ರತಿಭೆಗಳು ಅರಳುತ್ತಿವೆ. ನಮ್ಮ ನಾಡಿನ ಮಕ್ಕಳ ಈ ಯಶಸ್ಸಿ ನ ಪಯಣ ಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ವೇಗದಲ್ಲಿ ಮುಂದುವರಿಯಲಿದೆ ಎಂದು ಡಾ. ಅಜಯ್ ಧರ್ಮಸಿಂಗ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ,.

ರಾಯಚೂರು ಜಿಲ್ಲೆಯಲ್ಲಿ ಪ್ರತಿಭೆಯ ಅನಾವರಣವಾಗಿದೆ,



2023-24ರಲ್ಲಿ ಶೇ. 61.20 ಇದ್ದ ರಾಯಚೂರು, 2024-25ರಲ್ಲಿ ಶೇ. 52.05ಕ್ಕೆ ಕುಸಿತ ಕಂಡಿತು. ಆದರೆ 2025-26ರ ವಿಶೇಷವೆಂದರೆ, ರಾಯಚೂರಿನ ಮಾನ್ವಿ ತಾಲ್ಲೂಕಿನ ಸುಖ್ದೇವ್ ಎಂಬ ವಿದ್ಯಾರ್ಥಿ 625ಕ್ಕೆ 625 ಅಂಕ ಪಡೆದು ರಾಜ್ಯ ಟಾಪರ್ ಆಗಿರುವುದು ಈ ಭಾಗದ ಶೈಕ್ಷಣಿಕ ತಾಕತ್ತಿಗೆ ಸಾಕ್ಷಿ ಎಂದು ಡಾ. ಅಜಯ್ ಸಿಂಗ್ ಹೇಳಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ 2026 ಕಲ್ಯಾಣದ 7 ಜಿಲ್ಲಾವಾರು ಫಲಿತಾಂಶ

1) ವಿಜಯನಗರ 96.39
3) ಬಳ್ಳಾರಿ 93.35
4) ಕೊಪ್ಪಳ 93.1
5) ಬೀದರ್ 92.17
6) ಯಾದಗಿರಿ 91.89
7) ಕಲಬುರಗಿ 85.06

ಕಲ್ಯಾಣ ನಾಡಿನ ಶಿಕ್ಷಣ ರಂಗದಲ್ಲಿ ಬದಲಾವಣೆ ತರುವ ಸಂಕಲ್ಪ

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿನ ಅನಕ್ಷರತೆಯನ್ನು ಹೋಗಲಾಡಿಸಿ ಸಾಕ್ಷರತೆ ಹೆಚ್ಚಿಸಲು ಮತ್ತು ಶಿಕ್ಷಣದ ಗುಣಮಟ್ಟ ಕಾಪಾಡಲು, 2023-24 ರಿಂದ 2025-26ನೇ ಸಾಲಿನವರೆಗೂ ಕ.ಕ.ಪ್ರ.ಅ.ಮಂಡಳಿ ವತಿಯಿಂದ ಶಿಕ್ಷಣ ವಲಯದಡಿ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ, ಪ್ರೌಢ ಶಾಲೆ, ಕರ್ನಾಟಕ ಪಬ್ಲಿಕ್ ಶಾಲೆ, ನಲಿ-ಕಲಿ, ಅಂಗನವಾಡಿ, ವಸತಿ ನಿಲಯಗಳು, ಪದವಿ ಪೂರ್ವ ಕಾಲೇಜು, ಉನ್ನತ ಶಿಕ್ಷಣ, ಎನ್ ಐ ಸಿ ಇ/ಪಿಇಟಿಸಿ, ತಾಂತ್ರಿಕ ಶಿಕ್ಷಣ, ಶಿಕ್ಷಕರ ತರಬೇತಿ, ಶಿಕ್ಷಕರ ತರಬೇತಿ ಕೇಂದ್ರ, ವಿಜ್ಞಾನ ಕೇಂದ್ರ, ವಿಶ್ವವಿದ್ಯಾಲಯ, ಗ್ರಂಥಾಲಯಗಳಿಗೆ ಕಟ್ಟಡ, ಕೋಣೆ, ದುರಸ್ಥೀಕರಣ, ಕಂಪೌಂಡ ಗೋಡೆ, ಕುಡಿಯುವ ನೀರಿನ ಸೌಲಭ್ಯ, ಶುದ್ಧ ಕುಡಿಯುವ ನೀರಿನ ಘಟಕ, ಶೌಚಾಲಯ, ಪ್ರಯೋಗಾಲಯ ಕೋಣೆ, ಪಿಠೋಪಕರಣಗಳು, ಅಡುಗೆ ಕೋಣೆ, ಶಾಲೆ, ಕಾಲೇಜುಗಳಿಗೆ ಸಂಪರ್ಕ ರಸ್ತೆ, ಸ್ಮಾರ್ಟ ಕ್ಲಾಸ್, ಸಿ.ಸಿ. ಕ್ಯಾಮೆರಾ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳಿಗೆ ರೂ. 3013.35 ಕೋಟಿಗಳ ಅನುದಾನವನ್ನು ಶಿಕ್ಷಣ ಕ್ಷೇತ್ರಕ್ಕೆ ಒದಗಿಸಲಾಗಿರುತ್ತದೆ.

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡಲು 2023-24ನೇ ವರ್ಷವನ್ನು''ಶೈಕ್ಷಣಿಕ ವರ್ಷ'' ಎಂದು ಘೋಷಣೆ ಮಾಡಲಾಗಿದೆ. ಅದನ್ನು ''ಅಕ್ಷರ ಅವಿಷ್ಕಾರ'' ಯೋಜನೆ ಎಂದು ಪರಿಗಣಿಸಿ, ಅದರಡಿಯಲ್ಲಿ ಮಂಡಳಿಯ 2023-24ನೇ ಸಾಲಿನ ಮೈಕ್ರೋ ಮತ್ತು ಮ್ಯಾಕ್ರೋ ಯೋಜನೆಗೆ ನಿಗದಿಪಡಿಸಿದ ಒಟ್ಟು ಅನುದಾನದಲ್ಲಿ ಶೆ.25% ರಷ್ಟು ಅಂದರೆ ರೂ.652.50 ಕೋಟಿಗಳು, 2024-25ನೇ ಸಾಲಿಗೆ ಮೈಕ್ರೋ ಯೋಜನೆಗೆ ನಿಗದಿಪಡಿಸಿದ ಒಟ್ಟು ಅನುದಾನದಲ್ಲಿ ಶೇ.25% ರಷ್ಟು ಅಂದರೆ ರೂ.524.06 ಕೋಟಿಗಳು ಹಾಗೂ 2025-26ನೇ ಸಾಲಿನಲ್ಲಿ ರೂ.518.74 ಕೋಟಿಗಳಿಗೆ ನಿಗದಿಪಡಿಸಿರುವ ಅನುದಾನಕ್ಕೆ ಕ್ರಿಯಾಯೋಜನೆ ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ''ಅಕ್ಷರ ಅವಿಷ್ಕಾರ'' ಯೋಜನೆಯಡಿಯಲ್ಲಿ ಶಾಲೆಗಳ ನಿರ್ಮಾಣ, ಹೆಚ್ಚುವರಿ ಕೋಣೆಗಳ ನಿರ್ಮಾಣ, ವಿವಿಧ ಪಿಠೋಪಕರಣಗಳು, ಸ್ಮಾರ್ಟ ಕ್ಲಾಸ್, ಎನ್‌ಎಸ್‌ಕ್ಯುಎಫ್, ಇಸಿಸಿಇ, ಶಿಕ್ಷಕರಿಗೆ ವೇತನ, ವಿದ್ಯುತ್ತಿಕರಣ, ಶೌಚಾಲಯ ನಿರ್ಮಾಣ, ಗ್ರಂಥಾಲಯ ನಿರ್ಮಾಣ, ಪ್ರಾಥಮಿಕ, ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಉನ್ನತೀಕರಿಸಲು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಕೆಕೆಆರ್ಡಿಬಿ ಅಧ್ಯಕ್ಷರಾದ ಡಾ. ಅಜಯ್ ಸಿಂಗ್ ಹೇಳಿದ್ದಾರೆ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ 200 ಸರ್ಕಾರಿ ಶಾಲೆಗಳನ್ನು ''ಕರ್ನಾಟಕ ಪಬ್ಲಿಕ್ ಶಾಲೆ'' ಗಳನ್ನಾಗಿ ಉನ್ನತೀಕರಿಸಲಾಗಿದೆ. ರೂ.200.00 ಕೋಟಿಗಳ ಅನುದಾನವನ್ನು ಆಯವ್ಯಯದಲ್ಲಿ ಘೋಷಿಸಲಾಗಿದೆ. ಬಾಕಿ ಉಳಿದ ಅನುದಾನವನ್ನು ತಾಲೂಕಾವಾರು ನಿಗದಿಪಡಿಸಿದ ಮೈಕ್ರೋ ಯೋಜನೆ ಅಡಿಯಲ್ಲಿ ನಿಗದಿಪಡಿಸಲಾಗುತ್ತದೆ

ಕಲ್ಯಾಣ ಕರ್ನಾಟಕ ಭಾಗಕ್ಕೆ ಉನ್ನತ ಶಿಕ್ಷಣಕ್ಕೂ ಈ ಎರಡು ವರ್ಷಗಳಲ್ಲಿ ರೂ.350.00 ಕೋಟಿಗಳನ್ನು ಒದಗಿಸಲಾಗಿದೆ.

ಎಸ್.ಎಸ್.ಎಲ್.ಸಿ ಓದುತ್ತಿರುವ ವಿದ್ಯಾರ್ಥಿಗಳ ಫಲಿತಾಂಶ ಸುಧಾರಣೆಗಾಗಿ ಪ್ರತಿ ತಾಲೂಕಿಗೆ ರೂ.25.00 ಲಕ್ಷ ಅನುದಾನ ಇರಿಸಲಾಗಿದೆ. ಕಲಿಕಾಸರೆ ಪುಸ್ತಕಗಳನ್ನು ವಿತರಿಸಲಾಗಿದೆ. ಮುಖ್ಯಮಂತ್ರಿಗಳ ಸಲಹೆ- ಸೂಚನೆಯಂತೆ ಹೆಚ್ಚುವರಿ ಬೋಧನೆ ಸರಕಾರಿ ಶಾಲೆಗಳ ಹಂತದಲ್ಲಿ ಕೈಗೊಳ್ಳಲಾಗಿದೆ. ಇವೆಲ್ಲವು ದಿನ ಬೆಳಗಾದರೆ ಪರಿಣಾಮ ಬೀರುವಂತಹದ್ದಲ್ಲ. ಇವೆಲ್ಲವು ಬೇರು ಮಟ್ಟದಲ್ಲಿ ಮೊದಲು ರೂಢಿಗತವಾಗಿ ಮಕ್ಕಳ ಮೇಲೆ ಪರಿಣಾಮ ಬೀರಬೇಕು. ಆ ನಂತರದಲ್ಲಿ ಅದು ಫಲಿತಾಂಶದಲ್ಲಿ ಪ್ರತಿಫಲವಾಗುತ್ತದೆ. ಇದೀಗ ಕಲ್ಯಾಣದ ಭಾಗದಲ್ಲಿನ ಜಿಲ್ಲೆಗಳಲ್ಲಿ ಮಂಡಳಿಯ ಇವೆಲ್ಲಯೋಜನೆಗಳ ಸಫಲ ನಿಧಾನಕ್ಕೆ ಫಲಿತಾಂಶದಲ್ಲಿ ಪ್ರತಿಫಲವಾಗಲಾರಂಭಿಸಿದೆ. ಬರುವ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಫಲಿತಾಂಶ, ರಾಜ್ಯಮಟ್ಟದಲ್ಲಿನ ರ್ಯಾಕಿಂಗ್‌ನಲ್ಲಿಯೂ ಈ ಜಿಲ್ಲೆಗಳು ಮೇಲಿನ ಸ್ಥಾನ ಹೊಂದುವಂತಾಗಲಿದೆ ಎಂದು ಡಾ. ಅಜಯ್ ಸಿಂಗ್ ಸದಾಶಯ ವ್ಯಕ್ತಪಡಿಸಿದ್ದಾರೆ.

ದಾವಣಗೆರೆ ಚುನಾವಣೆ: ಅಲ್ಪಸಂಖ್ಯಾತರ ಮೇಲಿನ ಕಾಂಗ್ರೆಸಿಗರ ರಾಜಕೀಯ ದಾಳಿ ಖಂಡನೆ

ಕೊಪ್ಪಳ : ದಾವಣಗೆರೆ ದಕ್ಷಿಣ ವಿಧಾನಸಭಾ ಉಪ ಚುನಾವಣೆ ರಾಜಕಾರಣ: ಅಲ್ಪಸಂಖ್ಯಾತರ ಮೇಲಿನ ಕಾಂಗ್ರೆಸಿಗರ



ರಾಜಕೀಯ ದಾಳಿ ಖಂಡಿಸುತ್ತೇವೆ ಎಂದು ಎದ್ದೇಳು ಕರ್ನಾಟಕ ಹಾಗೂ ವಿವಿಧ ಸಂಘಟನೆಗಳು ಶುಕ್ರವಾರ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿವೆ.

ಸಭೆಯಲ್ಲಿ ಮಾತನಾಡಿದ ನಾಯಕರು ಕಾಂಗ್ರೆಸ್ ಹಿಡಿದಿರುವ ಅಧಃಪತನ ಹಾದಿಯ ಪ್ರತ್ಯಕ್ಷ ದರ್ಶನಕ್ಕೆ ಹಿಡಿದ ಕನ್ನಡಿಯಾಗಿದೆ.ಆತ್ಮಾವಲೋಕನಕ್ಕೆ ಸಿದ್ಧವಿಲ್ಲದ ಕಾಂಗ್ರೆಸ್ಸಿ ನಿಂದ ಅಲ್ಪಸಂಖ್ಯಾತರ ಭಾವನೆಗಳ ಮೇಲೆ ರಾಜಕೀಯ ಹಲ್ಲೆ ನಡೆದಿದೆ. ಜಾತ್ಯಾತೀತ ಮೌಲ್ಯಗಳಿಗೆ ತಿಲಾಂಜಲಿಜಾತಿ ಮತ್ತು ಕುಟುಂಬ ರಾಜಕಾರಣಕ್ಕೆ ರತ್ನಗಂಬಳಿಯ ಸದಾ ಸ್ವಾಗತ.ದಾವಣಗೆರೆ ಉಪ ಚುನಾವಣೆಗೆ ಟಿಕೆಟ್ ನೀಡುವ ವಿಚಾರದಲ್ಲಿ ಕಾಂಗ್ರೆಸ್ ನಡೆದುಕೊಂಡ ರೀತಿ ಜಿಗುಪ್ಸೆ ಮೂಡಿಸಿದರೆ, ಅದು ಈಗ ತನ್ನದೇ ಪಕ್ಷದ ಅಲ್ಪಸಂಖ್ಯಾತ ಮುಖಂಡರ ಮೇಲೆ ತೆಗೆದುಕೊಳ್ಳುತ್ತಿರುವ ಸೇಡಿನ ಕ್ರಮಗಳು ಆಕ್ರೋಶ ಹುಟ್ಟಿಸುತ್ತಿವೆ. ಬಹಳ ನಿರಾಶೆ ಮೂಡಿಸಿದೆ. ಕರ್ನಾಟಕದ ನಾಗರೀಕ ಸಮಾಜದ ಪರವಾಗಿ ಹಾಗೂ ನಡವಳಿಕೆ ಸುಧಾರಿಸಿ ಕೊಳ್ಳಬೇಕು. ಮಾತಿನಲ್ಲಿ ಜಾತ್ಯಾತೀತತೆ ಇದ್ದರೂ ಅದರ ನಡುವಳಿಕೆ ಕರ್ನಾಟಕ ಜಾತ್ಯಾತೀತ ಶಕ್ತಿಗಳನ್ನು ದುರ್ಬಲಗೊಳಿಸುವ ರೀತಿಯಲ್ಲಿ ಇದೆ ಎಂಬುದನ್ನು ನೇರ ಮಾತುಗಳಲ್ಲಿ ಹೇಳಲೇಬೇಕಾದ ಸಂದರ್ಭ ಎದುರಾಗಿದೆ.ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಂ ಸಮುದಾಯ ಅತ್ಯಂತ ಹೆಚ್ಚಿನ ಜನಸಂಖ್ಯಾ ಬಾಹುಳ್ಯವಿದ್ದರೂ ಲಿಂಗಾಯತ ಸಮುದಾಯದ ಶಾಮನೂರು ಶಿವಶಂಕರಪ್ಪ ಅವರೇ ಕಳೆದ 30 ವರ್ಷಗಳಿಂದ ಕಾಂಗ್ರೆಸ್ ಶಾಸಕರಾಗಿ ಮುಂದುವರೆಯುತ್ತಾ ಬಂದಿದ್ದಾರೆ. ಅವರ ನಿಧನದ ನಂತರ ಈ ಕ್ಷೇತ್ರವನ್ನು ಮುಸ್ಲಿಂ ಸಮುದಾಯಕ್ಕೆ ನೀಡಲಾಗುತ್ತದೆ ಎಂಬ ಭರವಸೆಯನ್ನು ಕಾಂಗ್ರೆಸ್ ನಾಯಕತ್ವ ನೀಡಿತ್ತು, ಕೇವಲ ಮುಸ್ಲಿಂ ಮಾತ್ರವಲ್ಲ ಕುಟುಂಬ ರಾಜಕಾರಣವನ್ನು ವಿರೋಧಿಸುವ ಎಲ್ಲ ಜಾತ್ಯಾತೀತ ಶಕ್ತಿಗಳ ಬಯಕೆಯೂ ಆಗಿತ್ತು. ಆದರೆ ಕುಟುಂಬ, ಜಾತಿ ಹಾಗೂ ಹಣದ ಬಲದ ಮುಂದೆ ಕಾಂಗ್ರೆಸ್ಸಿ ನ ಹೈಕಮಾಂಡ್ ಹಾಗೂ ರಾಜ್ಯ ನಾಯಕತ್ವ ಮಂಡಿಯೂರಿದ ಬಗೆ ಎಲ್ಲರಿಗೂ ಜಿಗುಪ್ಸೆ ಮೂಡಿಸಿತ್ತು. ಕಾಂಗ್ರೆಸ್ಸಿ ನ ಹಸಿಹಸಿ ಅವಕಾಶವಾದಿ ನಿಲುವಿನಿಂದ ಬೇಸತ್ತು ಕೇವಲ ಮುಸ್ಲಿಂ ಸಮುದಾಯದ ಮುಖಂಡರು ಮಾತ್ರವಲ್ಲ ಯಾವ ಜಾತ್ಯಾತೀತ ಶಕ್ತಿಗಳು ಸಹ ಇಲ್ಲಿನ ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲಿಲ್ಲ. ಎದ್ದೇಳು ಕರ್ನಾಟಕದ ವಿಚಾರಕ್ಕೆ ಬರುವುದಾದರೆ 2023 ರ ಚುನಾವಣೆಯಲ್ಲಿ ಕರ್ನಾಟಕದ ನಾಗರೀಕ ಸಂಘಟನೆಗಳ ಸಂಯುಕ್ತ ಶಕ್ತಿಯಾಗಿ ಎದ್ದೇಳು ಕರ್ನಾಟಕ ತನ್ನನ್ನು ಸಂಪೂರ್ಣವಾಗಿ ಸುರಿದುಕೊಂಡು ಕೆಲಸ ಮಾಡಿ ಸಂವಿಧಾನ ವಿರೋಧಿ ಬಿಜೆಪಿಯನ್ನು ಸೋಲಿಸುವುದರಲ್ಲಿ ಮಹತ್ವದ ಪಾತ್ರ ನಿರ್ವಹಿಸಿತ್ತು. 2025ರಲ್ಲಿ ನಡೆದ ಉಪ ಚುನಾವಣೆಗಳಲ್ಲೂ ಶಿಗ್ಗಾಂವಿ ಹಾಗೂ ಸಂಡೂರು ಕ್ಷೇತ್ರದಲ್ಲಿ ತನ್ನದೇ ರೀತಿಯಲ್ಲಿ ಸಕಾರಾತ್ಮಕ ಕೊಡುಗೆ ನೀಡಿತ್ತು. ಆದರೆ ಕಾಂಗ್ರೆಸ್ ನಡೆದುಕೊಂಡ ರೀತಿಯಿಂದಾಗಿ ನಾವು ಈ ಬಾರಿಯ ಉಪ ಚುನಾವಣೆಯಲ್ಲಿ ಮಧ್ಯ ಪ್ರವೇಶಿಸದೇ ಇರಲು ತೀರ್ಮಾನಿಸಿದೆವು. ಇದು ಎದ್ದೇಳು ಕರ್ನಾಟಕದ ಕತೆ ಮಾತ್ರವಲ್ಲ ಬಹುಪಾಲು ಜನಪರ ಸಂಘಟನೆಗಳ ನಿಲುವು ಸಹ ಇದೇ ಆಗಿತ್ತು.ದಾವಣಗೆರೆಯ ಜಾತ್ಯಾತೀತ ಶಕ್ತಿಗಳ ಮುಂದೆ ಹಾಗೂ ಅಲ್ಪಸಂಖ್ಯಾತ ಸಮುದಾಯದ ಮುಂದೆ ದೊಡ್ಡ ಇಕ್ಕಟ್ಟು ಸೃಷ್ಟಿಯಾಗಿತ್ತು. ಕಾಂಗ್ರೆಸ್ಸಿ ನ ನಿಲುವನ್ನಂತೂ ಯಾರೂ ಒಪ್ಪುವ ಮಾತೇ ಇರಲಿಲ್ಲ. ಆದರೆ ಕೆಲವರು ಕಾಂಗ್ರೆಸ್ಸ ನ್ನು ಬೈದುಕೊಂಡು ಕಾಂಗ್ರೆಸ್ಸಿ ಗೇ ಮತ ಹಾಕಿದರು. ಕೆಲವರು ಕೋಮುವಾದಿಗಳನ್ನು ಮುಂದೆ ನೋಡಿಕೊಳ್ಳೋಣ, ಈ ಬಾರಿ ಕಾಂಗ್ರೆಸ್ಸಿ ಗೆ ಪಾಠ ಕಲಿಸಲೇಬೇಕು ಎಂದು ಇತರೆ ಅಬ್ಯಾರ್ಥಿಗಳಿಗೆ ಓಟು ಹಾಕಿದರು. ಕೆಲವರು ಓಟು ಮಾಡಲಿಕ್ಕೇ ಹೋಗಲಿಲ್ಲ. ಫಲಿತಾಂಶ ಏನೇ ಬರಬಹುದು, ಅಲ್ಪ ಅಂತರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹಣ ಬಲದ ಮೇಲೆ ಗೆದ್ದರೂ ಗೆಲ್ಲಬಹುದು, ಆದರೆ ಕಾಂಗ್ರೆಸ್ ನೈತಿಕವಾಗಿ ಸೋತಾಗಿದೆ.ಕಾಂಗ್ರೆಸ್ಸಿ ನ ಈ ನೈತಿಕ ಸೋಲಿನ ಹೊಣೆ ಹೊರಬೇಕಾಗಿರುವುದು ಯಾರು ? ನಿಸ್ಸಂಶಯವಾಗಿ ಕಾಂಗ್ರೆಸ್ಸಿ ನ ಹೈಕಮಾಂಡ್, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು. ಕಾಂಗ್ರೆಸ್ಸಿ ನ ಈ ಸ್ಥಿತಿಗೆ ಕಾರಣವಾಗಿರುವ ಈ ನಾಯಕರು ಆತ್ಮಾವಲೋಕನ ಮಾಡಿಕೊಳ್ಳುವ ಬದಲು ನೊಂದಿದ್ದ ದಾವಣಗೆರೆಯ ಅಲ್ಪಸಂಖ್ಯಾತ ಸಮುದಾಯದ ಭಾವನೆಗಳಿಗೆ ಸ್ಪಂದಿಸಿದ ಅಲ್ಪಸಂಖ್ಯಾತ ಸಮುದಾಯದ ಆದರೆ ಜಾತ್ಯಾತೀತ ನಿಲುವಿಗೆ ಮತ್ತು ಕಾಂಗ್ರೆಸ್ಸಿ ಗೆ ಬದ್ಧವಾಗಿದ್ದ ನಾಯಕರ ತಲೆದಂಡಕ್ಕೆ ಹೊರಟಿರುವುದು ಅಕ್ಷಮ್ಯ ಅಪರಾಧ. ಇದನ್ನು ಎದ್ದೇಳು ಕರ್ನಾಟಕ ತೀವ್ರ ರೀತಿಯಲ್ಲಿ ಖಂಡಿಸುತ್ತದೆ.ದಾವಣಗೆರೆಯ ಈ ಬಲಾಢ್ಯ ಕುಟುಂಬದವರು ಜಾತಿ ಕಾರಣಕ್ಕೆ ಬಿಜೆಪಿಯ ರಾಘವೇಂದ್ರ ಅವರನ್ನು ಗೆಲ್ಲಿಸಿ ಎಂದು ಬಹಿರಂಗವಾಗಿ ಕರೆ ಕೊಟ್ಟಾಗಲೂ ಯಾವುದೇ ಕ್ರಮ ತೆಗೆದುಕೊಳ್ಳದೆ ತೆಪ್ಪಗಿದ್ದ ಕಾಂಗ್ರೆಸ್ ಮುಖಂಡರು ಈಗ ಇಲ್ಲದ ಕಾರಣ ಹುಡುಕಿ ಅಲ್ಪಸಂಖ್ಯಾತ ಮುಖಂಡರನ್ನು ದಮನಿಸಲು, ಅಲ್ಪಸಂಖ್ಯಾತ ಮುಖಂಡರ ನಡುವೆ ಒಡಕು ತರಲು ಪ್ರಯತ್ನಿಸುತ್ತಿರುವುದು ನಾಚಿಕೆಗೇಡಿನ ವಿಚಾರವಾಗಿದೆ.

ಕಾಂಗ್ರೆಸ್ ಇದೇ ಧೋರಣೆಯನ್ನು ಮುಂದುವರಿಸಿದರೆ ಮುಂದಿನ ಚುನಾವಣೆಯಲ್ಲಿ ಎದ್ದೇಳು ಕರ್ನಾಟಕವನ್ನೂ ಒಳಗೊಂಡಂತೆ ಎಲ್ಲಾ ಜನಪರ ಶಕ್ತಿಗಳ ಬೆಂಬಲ ಕಳೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಬಯಸುತ್ತೇವೆ.ದಾವಣಗೆರೆ ವಿದ್ಯಮಾನ ಬರಲಿರುವ 2028 ರ ಚುನಾವಣೆಗೆ ಮುನ್ನದ ಎಚ್ಚರಿಕೆ ಗಂಟೆಯಾಗಿದೆ. ಅಲ್ಪಸಂಖ್ಯಾತರನ್ನು, ದಲಿತರನ್ನು, ಜಾತ್ಯಾತೀತ ಜನತೆಯನ್ನು, ಪ್ರಗತಿಪರ ಶಕ್ತಿಯನ್ನು ಟೇಕನ್ ಫಾರ್ ಗ್ರ್ಯಾಂಟೆಡ್ ಮಾಡಿಕೊಳ್ಳಬೇಡಿ ಎಂದು ದಾವಣಗೆರೆ ಹೇಳುತ್ತಿದೆ. ಕಾಂಗ್ರೆಸ್ ನಾಯಕತ್ವ ಈಗಾದರೂ ತನ್ನ ತಪ್ಪನ್ನು ನೋಡಿಕೊಂಡು ಆಗಿರುವ ಅನಾಹುತವನ್ನು ಸರಿಪಡಿಸುವ ದಿಕ್ಕಿನಲ್ಲಿ ಹೆಜ್ಜೆ ಇಡಬೇಕು.ಇದು ಕಾಂಗ್ರೆಸಿನ ಮುಸ್ಲಿವ್ ವಿರೋಧಿ ಧೋರಣೆಗಳನ್ನು ಕೊಪ್ಪಳದ ಪ್ರಗತಿಪರ ಸಂಘಟನೆಗಳು ಖಂಡಿಸುತ್ತವೆ.ಮುಂಬರುವ ದಿನಗಳಲ್ಲಾದರೂ ಕಾಂಗ್ರೆಸ್ ತನ್ನ ನಿಲುವುಗಳನ್ನು ಬದಲಾಯಿಸಿಕೊಂಡು ಪ್ರಗತಿಯತ್ತ ಆಲೋಚಿಸುವುದು ಒಳಿತು. ಕಾಂಗ್ರೆಸಿನ ಮುಸ್ಲಿಮ್ ವಿರೋಧಿ ಧೋರಣೆಯು ಕೇವಲ ದಾವಣಗೆರೆಗೆ ಅಷ್ಟೇ ಸೀಮಿತವಾಗಿ ಉಳಿದಿಲ್ಲ. ಕೊಪ್ಪಳವು ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲೂ ಇದೇ ವಾತಾವರಣ ಇದೆ ಅನ್ನುವುದನ್ನು ಕಾಂಗ್ರೆಸ್ ಹೈಕಮಾಂಡ್ ಬೇಗ ಅರಿತಷ್ಟು ಒಳ್ಳೆಯದು ಎಂದು ಎದ್ದೇಳು ಕರ್ನಾಟಕ ಹಾಗೂ ಕೊಪ್ಪಳದ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕ ಬಸವರಾಜ್ ಶೀಲವಂತ.ಕರ್ನಾಟಕ ಮುಸ್ಲಿಮ್ ಜಮಾಅತ್ ಮಾಜಿ ಜಿಲ್ಲಾ ಸಂಚಾಲಕ ಮೌಲಾನಾ ಮೊಹಮ್ಮದ್ ಅಬುಲ್ ಹಸನ್ ಖಾರಿಝಿ.ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ. ಗಫಾರ್. ಪಾಸ್ಪರ್ಸ್ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷ ಚನ್ನಬಸಪ್ಪ ಅಪ್ಪಣ್ಣವರ್. ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾದ ಜಿಲ್ಲಾ ಅಧ್ಯಕ್ಷ ಆದಿಲ್ ಪಟೇಲ್.ಭಾರತೀಯ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಸಂಚಾಲಕ ತುಕಾರಾವ್ ಪಾತ್ರೋಟಿ.ದಲಿತ ಸಂಘಟನೆಯ ಮುಖಂಡ ಗವಿಸಿದ್ದಪ್ಪ ಹಲಗಿ ಕುಣಿಕೆರಿ. ಪೇಂಟರ್ ಕಾರ್ಮಿಕರ ಸಂಘದ ಅಧ್ಯಕ್ಷ ರಜಾಕ್ ಪೇಂಟರ್. ಖಜಾಂಚಿ ಆಸಿಫ್ ಕಿಲ್ಲೆದಾರ್.ಇಂತ್ಯಾಝ್ ಎಮ್. ಪಲ್ಟನ್.ಕೊಳಚೆ ನಿರ್ಮೂಲನಾ ವೇದಿಕೆ ಜಿಲ್ಲಾ ಸಂಚಾಲಕ ಮುಖಬೂಲ್ ರಾಯಚೂರು.ಶಿವಪ್ಪ ಹಡಪದ್.ಭಾಗ್ಯನಗರದ ಕಟ್ಟಡ ಕಾರ್ಮಿಕರ ಸಂಘದ ಮಾಜಿ ಅಧ್ಯಕ್ಷ ದೇವಪ್ಪ ಎಸ್.ಕಟ್ಟಿಮನಿ ಮುಂತಾದವರು ಸಭೆಯಲ್ಲಿ ಉಪಸ್ಥಿತರಿದ್ದರು.

ಪುಸ್ತಕ ಪ್ರೀತಿ ಹೆಚ್ಚಿಸುವ ವಿಶೇಷ ಕಾರ್ಯಕ್ರಮ: ಡಾ.ಬಾಗೇವಾಡಿ



ಕಲಬುರಗಿ,ಏ.23-ಮನೆಗೊಂದು ಗ್ರಂಥಾಲಯ ಅನುಷ್ಠಾನಮಾಡಿ ಸಾರ್ವಜನಿಕರಿಗೆ ಪುಸ್ತಕ ಓದು ಹೆಚ್ಚಿಸುವ ವಿಶೇಷ ಕಾರ್ಯಕ್ರಮ ಎಂದು ಖ್ಯಾತ ಸಾಹಿತಿಗಳು ಡಾ. ಶೈಲಜಾ ಬಾಗೇವಾಡಿ ಹೇಳಿದರು.

ಕನ್ನಡ ಪುಸ್ತಕ ಪದಾಧಿಕಾರ ಹಾಗೂ ಜಿಲ್ಲಾ ಜಾಗೃತ್ ಸಮಿತಿ ನಗರದ ಕೋಟ್ನೂರ್ ಡಿ ಬಡಾವಣೆಯ ಪುಸ್ತಕ ಪ್ರೇಮಿ ಶಿಕ್ಷಕರಾದ ಚಂದ್ರಶೇಖರ್ ಕಟ್ಟಿಮನಿ ಅವರ ಮನೆಯಲ್ಲಿ ಮನೆಗೊಂದು ಗ್ರಂಥಾಲಯ ಉದ್ಘಾಟನೆ ಮಾಡಿ ಮಾತನಾಡಿದರು ಕನ್ನಡ ಪುಸ್ತಕ ಪ್ರಾಧಿಕಾರ ಮನೆಗೊಂದು ಗ್ರಂಥಾಲಯ ಒಳ್ಳೆಯ ಯೋಜನೆಯನ್ನು ಹಾಕಿಕೊಂಡು ಪ್ರತಿಯೊಬ್ಬರ ಮನೆಯಲ್ಲಿ ಗ್ರಂಥಾಲಯ ಇರುವ ಹಾಗೆ ಮಾಡುತ್ತಿರುವುದು ಶ್ಲಾಘನೀಯ ಇವತ್ತಿನ ವಿದ್ಯಾರ್ಥಿಗಳು ಮೊಬೈಲ್ ಕಡೆ ವಾಲಿರುವುದನ್ನು ಕಂಡು ಅವರನ್ನು ಪುಸ್ತಕ ಓದುವ ರುಚಿಯನ್ನು ಹೆಚ್ಚಿಸುವ ವಿಶೇಷ ಪ್ರಯತ್ನ ಪ್ರಾಧಿಕಾರದು ಎಂದು ಬಾಗೇವಾಡಿ ಹೇಳಿದರು.

ಕಾರ್ಯಕ್ರಮ ಅಧ್ಯಕ್ಷತೆಯನ್ನು ವಹಿಸಿದ ರಾಜ್ಯ ಸದಸ್ಯರಾದ ಬಿ ಎಚ್ ನೀರಗುಡಿ ಅವರು ಮಾತನಾಡಿ ಪುಸ್ತಕ ಪ್ರಾಧಿಕಾರ ವಿಶೇಷ ಕಾರ್ಯಕ್ರಮಗಳ ಹಮ್ಮಿಕೊಳ್ಳೋದರ ಜೊತೆಗೆ ಈ ಭಾಗದ ಸಾಹಿತಿಗಳ ಸಂಪುಟಗಳನ್ನು ಹೊರ ತರುವುದು ಶಾಲಾ-ಕಾಲೇಜುಗಳಲ್ಲಿ ನನ್ನ ನೆಚ್ಚಿನ ಪುಸ್ತಕ , ಪ್ರಬಂಧ ಸ್ಪರ್ಧೆ ಹಾಗೂ ರಸಪ್ರಶ್ನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಈ ಭಾಗದ ಶಾಲಾ ಕಾಲೇಜುಗಳಿಗೆ ಉಚಿತವಾಗಿ ಪುಸ್ತಕಗಳನ್ನು ನೀಡುವುದು. ಮನೆಗಳಲ್ಲಿ ಗ್ರಂಥಾಲಯ ನಿರ್ಮಿಸುವ ರವರಿಂದ ಪುಸ್ತಕ ಓದುವ್ಯಾಸ ಇಮ್ಮಡಿ ಆಗುತ್ತದೆ ಮನುಷ್ಯರಿಗೆ ಜ್ಞಾನ ವೃದ್ಧಿ ಆಗುತ್ತೆ ಎಂದು ಹೇಳಿದರು.

ಮನೆಯಲ್ಲಿ ಗ್ರಂಥಾಲಯ ನಿರ್ಮಿಸಿದ ಶಿಕ್ಷಕ ಚಂದ್ರಶೇಖರ ಕಟ್ಟಿಮನಿ ಅವರು ಸಾಹಿತ್ಯದ ಸ್ಪರ್ಧಾ ಪರೀಕ್ಷೆಯ ಸಾವಿರಾರು ಪುಸ್ತಕಗಳನ್ನು ಸಂಗ್ರಹಿಸಿ ವಿದ್ಯಾರ್ಥಿಗಳಿಗೆ ಓದಲು ನೀಡುತ್ತಿದ್ದೇನೆ. ಇನ್ನು ದೊಡ್ಡದಾದ ಗ್ರಂಥಾಲಯ ಮನೆಯಲ್ಲಿ ನಿರ್ಮಿಸುವ ಯೋಜನೆಯನ್ನು ಹಾಕಿಕೊಂಡಿದ್ದೇನೆ ಪುಸ್ತಕಗಳು ವಿದ್ಯಾರ್ಥಿಗಳಿಗೆ ಉಪಯೋವಾಗಲಿ ಎನ್ನುವ ಮನೋಭಾವನೆ ಹೊಂದಿದ್ದೇನೆ ಎಂದು ಹೇಳಿದರು.

ಜಿಲ್ಲಾ ಜಾಗೃತಿ ಸಮಿತಿಯ ಸಂಚಾಲಕರಾದ ಡಾ. ಶೋಭಾದೇವಿ ಚೆಕ್ಕಿ ಕಾರ್ಯಕ್ರಮ ನಿರ್ವಹಿಸಿ ಕಲ್ಬುರ್ಗಿ ನಗರದಲ್ಲಿ ಸಾವಿರ ಮನೆಗಳಲ್ಲಿ ಮನೆಗೊಂದು ಗ್ರಂಥಾಲಯ ಅನುಷ್ಠಾನ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಯುವ ಸಾಹಿತಿ ಚಾಮರಾಜ ದೊಡ್ಡಮನಿ ಜಾಗೃತ ಸಮಿತಿ ಸದಸ್ಯ ಡಾ.ಪರ್ವಿನ್ ಸುಲ್ತಾನಾ ಸೇರಿದಂತೆ ಮತ್ತಿತರರು ಇದ್ದರು.

ದ್ವಿಭಾಷಾ ನೀತಿ ಹೆಸರಲ್ಲಿ ಇಂಗ್ಲಿಷ್ ಹೇರಿಕೆ: ಎಐಡಿಎಸ್‌ಓ ಆಕ್ರೋಶ

ಕಲಬುರಗಿ,ಏ.23-

ದ್ವಿಭಾಷಾ ನೀತಿ ಹೆಸರಿನಲ್ಲಿ ಇಂಗ್ಲೀಷ್ ಮಾಧ್ಯಮ ಹೇರಿಕೆ ವಿರೋಧಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ಜಿಲ್ಲಾ ಸಮಿತಿ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿನೇತೃತ್ವದಲ್ಲಿ ನಗರದ ಎಸ್‌ವಿಪಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಎಐಡಿಎಸ್‌ಒ ಜಿಲ್ಲಾ ಅಧ್ಯಕ್ಷ ತುಳಜರಾಮ ಎನ್.ಕೆ. ಅವರು ಮಾತನಾಡಿ, ರಾಜ್ಯದ 4404 ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಆಂಗ್ಲಮಾಧ್ಯಮವನ್ನು ಆರಂಭಿಸಲು ರಾಜ್ಯ ಸರ್ಕಾರ ಆದೇಶಿಸಿದ್ದು, ಎಲ್ಲಾ ಜಿಲ್ಲೆಗಳಲ್ಲಿ ಈಗಾಗಲೇ ಸರಕಾರಿ ಶಾಲೆ ಶಿಕ್ಷಕರಿಗೆ ಆಂಗ್ಲ ಮಾಧ್ಯಮ ತರಬೇತಿ ನೀಡಲಾಗುತ್ತಿದೆ. ಸರಕಾರ ಇದನ್ನು ದ್ವಿಭಾಷಾ ಮಾಧ್ಯಮ ಎಂದು ಕರೆಯುತ್ತಿದ್ದರೂ ಇಂಗ್ಲೀಷ್‌ನಲ್ಲೇ ಪಾಠ ಮಾಡಲು ಹಲವೆಡೆ ಶಿಕ್ಷಕರಿಗೆ ನಿರ್ದೇಶನ ನೀಡಲಾಗುತ್ತಿದೆ ಎಂದರು.

ಒಂದನೇಯ ಪುಟದಿಂದ

ದೆಹಲಿಯಲ್ಲಿ ಡಿಕೆ ಸಹೋದರರ ಬಿಗಿ ಪಟ್ಟು: ಮೇ ಮೊದಲ ವಾರವೇ ದೊಡ್ಡ ಬೆಳವಣಿಗೆ ಸಾಧ್ಯತೆ?

ಸಂಪುಟ ವಿಸ್ತರಣೆ ಅಥವಾ ಪುನರಚನೆಗಿಂತ ಮೊದಲು ನಾಯಕತ್ವ ಬದಲಾವಣೆ ಮತ್ತು ಅಧಿಕಾರ ಹಂಚಿಕೆ ಆಗಬೇಕು ಎಂಬ ಪ್ರಸ್ತಾಪವನ್ನು ಡಿಕೆ ಬಣ ಮುಂದಿಡುತ್ತಿದೆ. ಇತ್ತ ಸಿಎಂ ಬಣ ಕೂಡ ಮೇಲಿಂದ ಮೇಲೆ ಸಭೆಗಳನ್ನು ನಡೆಸಿ ಹೈಕಮಾಂಡ್ ಕರೆದರೆ ಮುಂದಿನ ತಂತ್ರಗಾರಿಕೆ ಏನು ಎಂಬುದರ ಬಗ್ಗೆ ಸಿದ್ಧತೆ ನಡೆಸುತ್ತಿದೆ. ಮೇ ಮೊದಲ ವಾರದ ಬಳಿಕ ರಾಜ್ಯ ರಾಜಕಾರಣ ದೆಹಲಿಗೆ ಶಿಫ್ಟ್ ಆಗುವ ಎಲ್ಲ ಸಾಧ್ಯತೆಗಳಿವೆ.

ಡಾ.ರಾಜಕುಮಾರ ಜನ್ಮ ದಿನಾಚರಣೆ

ಕನ್ನಡ ಚಿತ್ರರಂಗವು ವಿಶ್ವದಲ್ಲೇ ಅತ್ಯಂತ ದೊಡ್ಡ ಮಟ್ಟದಲ್ಲಿ ಬೆಳೆಯಬೇಕು ಎಂಬುದು ರಾಜಕುಮಾರ್ ಅವರ ಆಸೆಯಾಗಿತ್ತು. ನಟನೆಯಲ್ಲಿ ತಮ್ಮನ್ನು ತಾವೇ ಮರೆತು ಹೋಗುತ್ತಿದ್ದರು. ಅವರು ಕರ್ನಾಟಕಕ್ಕೆ ಸಿಕ್ಕ ಅಮೂಲ್ಯ ವ್ಯಕ್ತಿಯಾಗಿದ್ದು, ಅದಕ್ಕಾಗಿ ಅವರನ್ನು ಮುತ್ತುರಾಜ್ ಎಂದು ಕರೆಯಲಾಗುತ್ತದೆ. ರಾಯಚೂರಿನಲ್ಲಿ ಕನ್ನಡವನ್ನು ಉಳಿಸಿ, ಬೆಳೆಸಲು ಎಲ್ಲರೂ ಶ್ರಮಿಸಬೇಕು ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ಆರ್. ಗುರುನಾಥ ಅವರು ಮಾತನಾಡಿ, ಡಾ. ರಾಜಕುಮಾರ್ ಅವರು ರಂಗಭೂಮಿಯಿಂದ ಬೆಳೆದು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ಅವರನ್ನು ಅಭಿಮಾನಿಗಳು ಪ್ರೀತಿಯಿಂದ ಅಣ್ಣಾವ್ರು ಎಂದು ಕರೆದಿದ್ದಾರೆ. ಅವರಂತಹ ನಟನನ್ನು ಮತ್ತೆ ಕಾಣಲು ಸಾಧ್ಯವಿಲ್ಲ. ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದರೂ ಅವರು ಯಾವುದೇ ಪಕ್ಷದೊಂದಿಗೆ ಗುರುತಿಸಿಕೊಂಡಿರಲಿಲ್ಲ. ಅವರ ಆದರ್ಶಗಳನ್ನು ನಾವು ಎಲ್ಲರೂ ಪಾಲಿಸಬೇಕು ಎಂದರು.

ಡಾ. ದಂಡಪ್ಪ ಬಿರಾದಾರ್ ಅವರು ಮಾತನಾಡಿ, ರಾಜಕುಮಾರ್ ಅವರ 77 ವರ್ಷಗಳ ಜೀವನ ಅದ್ಭುತ ಪ್ರಯಾಣವಾಗಿತ್ತು. 1954ರಲ್ಲಿ ಬೇಡರ ಕಣ್ಣಪ್ಪ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ ಅವರು 200ಕ್ಕೂ ಹೆಚ್ಚು ಚಿತ್ರಗಳಲ್ಲಿ ನಾಯಕ ನಟರಾಗಿ ನಟಿಸಿದ್ದಾರೆ. ಒಂದೇ ಚಿತ್ರದಲ್ಲಿ ಅಭಿನಯ ಹಾಗೂ ಗಾಯನ ಎರಡೂ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಪ್ರಶಸ್ತಿ ಪಡೆದ ದೇಶದ ಏಕೈಕ ನಟ ಅವರು.

ಅವರು ನಟಿಸಿದ ಅನೇಕ ಚಿತ್ರಗಳಿಂದ ಪ್ರೇರೇಪಿತರಾದ ಜನ ಸಮಾಜ ಸೇವೆಗೆ ಮುಂದಾಗಿರುವುದು ವಿಶೇಷವಾಗಿದೆ. ಅವರು ನಟನಾಗಿ ಮಾತ್ರವಲ್ಲದೇ ಒಬ್ಬ ಆದರ್ಶ ವ್ಯಕ್ತಿಯಾಗಿ ಕಾಣುತ್ತಾರೆ. ಸಿನಿಮಾ ಕ್ಷೇತ್ರದ ಮೂಲಕ ಕನ್ನಡ ನಾಡು-ನುಡಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರು ಹೆಚ್ಚಾಗಿ ಭಾಷೆ, ನೆಲ, ಜಲ ಮಹತ್ವದ ಕುರಿತ ಚಿತ್ರಗಳಿಗೆ ಒತ್ತು ನೀಡುತ್ತಿದ್ದರು. ಅನೇಕ ಕಲಾವಿದರು ಹಾಗೂ ಸಹನಟರಿಗೂ ವೈಯಕ್ತಿಕವಾಗಿ ಸಹಾಯಹಸ್ತ ಚಾಚುತ್ತಿದ್ದರು. ಸರಳ ಜೀವನಕ್ಕೆ ಆದ್ಯತೆ ನೀಡುತ್ತಿದ್ದರು. ಜನರ ಹೃದಯದಲ್ಲಿ ನೆಲೆನಿಂತ ಮಾನವೀಯ ಗುಣವುಳ್ಳ ನಾಯಕ ನಟರಾಗಿದ್ದರು ಎಂದರು.

ಅಭಿಮಾನಿಗಳಿಂದ ಗಾಯನ:

ಡಾ. ರಾಜ್ ಕುಮಾರ್ ಅವರ 97ನೇ ಜಯಂತಿ ಅಂಗವಾಗಿ ಉದಯ ಶಂಕರ್ ಅವರು ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ನಾವಾಡುವ ನುಡಿಯೇ ಕನ್ನಡ ನುಡಿ ಹಾಡುಗಳನ್ನು ಹಾಡಿದರು. ಕೆ.ಕೆ.ಆರ್.ಸಿ.ಟಿ. ನೌಕರ ಗುರು ದೇವರಮನಿ ಅರಕೇರಾ ಅವರು ಆ ದೇವರ ಹಾಡು ಸೇರಿದಂತೆ ಪ್ರತಾಪ್ ರೆಡ್ಡಿ, ಮೈತ್ರಿರ್ಕ್ರ ಮಲ್ಲಿಕಾರ್ಜುನ ಅವರು ಹಲವು ಹಾಡುಗಳನ್ನು ಹಾಡಿದರು.

ಇದೇ ಸಂದರ್ಭದಲ್ಲಿ ವೆಂಕಟೇಶ್ವರ ಕಾಲೇಜಿನ ಪ್ರಾಂಶುಪಾಲ ನರಸಿಂಹ ಸಾಗರ್, ಕಸಾಪ ಕಾರ್ಯದರ್ಶಿ ರೇವತ್ ರಾವ್, ಅನಿಲ್, ಕರ್ನಾಯ, ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಬಸವರಾಜ, ಮಹಿಳಾ ಘಟಕದ ಅಧ್ಯಕ್ಷ ನಿರ್ಮಲ ಬೆಣ್ಣೆ, ಮಹಿಳಾ ಮುಖಂಡರಾದ ಪಿ. ಸುರೇಖಾ ಚೆನ್ನರೆಡ್ಡಿ ಸೇರಿದಂತೆ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರತಿಭಾ ಗೋನಾಳ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

ಬಡತನ ಮೆಟ್ಟಿ ನಿಂತು ಸಾಧನೆ ಮಾಡಿದ ಸೋಮವ್ವ

ಈ ಸಾಧನೆ ಕೇವಲ ವೈಯಕ್ತಿಕ ಸಾಧನೆಯಲ್ಲ, ಇದು ಸಂಕಷ್ಟಗಳನ್ನು ಎದುರಿಸುತ್ತಿರುವ ಅನೇಕ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ. ಬಡತನವು ಸಾಧನೆಗೆ ಅಡ್ಡಿಯಾಗುವುದಿಲ್ಲ ಎಂಬುದಕ್ಕೆ ಸೋಮವ್ವ ಸ್ಪಷ್ಟ ಉದಾಹರಣೆಯಾಗಿದ್ದಾಳೆ.

ಸಿರವಾರ್ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿನ ಸಮಸ್ಯೆ: ಪ್ರಯಾಣಿಕರ ಪರದಾಟ

ಮಕ್ಕಳೊಂದಿಗೆ ಪ್ರಯಾಣಿಸುವವರು ನೀರಿನ ಹನಿಗಾಗಿ ಪರದಾಡುವಂತಾಗಿದೆ.

ಅಧಿಕಾರಿಗಳ ನಿರ್ಲಕ್ಷ್ಯ: ಬಸ್ ನಿಲ್ದಾಣದಲ್ಲಿ ನೀರಿನ ಸಮಸ್ಯೆ ಇರುವ ಬಗ್ಗೆ ಹಲವು ಬಾರಿ ಸಾರ್ವಜನಿಕರು ಸಾರಿಗೆ ಸಂಸ್ಥೆಯ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ, ಇದುವರೆಗೆ ಯಾವುದೇ ಶಾಶ್ವತ ಪರಿಹಾರ ಸಿಕ್ಕಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

ಸಾರ್ವಜನಿಕರ ಆಗ್ರಹ:

ಸಿರವಾರ್ ಒಂದು ಮುಖ್ಯ ವಾಣಿಜ್ಯ ಕೇಂದ್ರವಾಗಿದ್ದು, ದಿನನಿತ್ಯ ಸಾವಿರಾರು ಪ್ರಯಾಣಿಕರು ಇಲ್ಲಿಂದ ವಿವಿಧೆಡೆ ಸಂಚರಿಸುತ್ತಾರೆ. ಇಷ್ಟು ದೊಡ್ಡ ಬಸ್ ನಿಲ್ದಾಣದಲ್ಲಿ ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದು ಅಧಿಕಾರಿಗಳ ಬೇಜವಾಬ್ದಾರಿತನವನ್ನು ತೋರಿಸುತ್ತದೆ. ಕೂಡಲೇ ಇಲ್ಲಿನ ನೀರಿನ ಘಟಕವನ್ನು ದುರಸ್ತಿಗೊಳಿಸಬೇಕು ಅಥವಾ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು, ಎಂದು ಸ್ಥಳೀಯ ಪ್ರಯಾಣಿಕರು ಆಗ್ರಹಿಸಿದ್ದಾರೆ.

ರೈಲಿನಿಂದ ಕಾಲು ಜಾರಿ ಬಿದ್ದು ಯುವಕ ಮೃತ್ಯು

ಕೆಳಗೆ ಬಿದ್ದಿದ್ದಾರೆ ಎಂದು ತಿಳಿದುಬಂದಿದೆ.

ಘಟನೆಯ ಬಳಿಕ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಸಾವಿನ ಕುರಿತು ಕೆಲವು ಅನುಮಾನಗಳು ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.




ಗಂಜಹಳ್ಳಿ:ದಿ.ಪರುಶುರಾಮ ಸ್ಮರಣಾರ್ಥ ಉಚಿತ ಆರೋಗ್ಯ ತಪಾಸಣಾ ಶಿಬಿರ ಅರೋಗ್ಯ ತಪಾಸಣೆ: ವಿದ್ಯಾರ್ಥಿಗಳ ತಂಡದ ಕಾರ್ಯ ಶ್ಲಾಘನೆ

ಜೀವನ ಉದ್ದಗಲಕ್ಕೂ ಬದುಕು ಸ್ಫೂರ್ತಿದಾಯಕವಾಗಬೇಕು ಹೊರತು ವ್ಯರ್ಥ ಆಗಬಾರದು ಎಂದು ಇಂದಿನ ಯುವಜನತೆಗೆ ಕರೆ ನೀಡಿದರು. ಸಕಾರಾತ್ಮಕ ಆಲೋಚನೆಗಳಿಂದ ಮಾತ್ರ ಇಂತಹ ಪುಣ್ಯ ಕಾರ್ಯ ಮಾಡಲು ಸಾಧ್ಯವಾಗುತ್ತದೆ ಎಂದರು. ಇಂದಿನ ಯುವಜನತೆ ಇಂತಹ ಪುಣ್ಯದ ಕಾರ್ಯಗಳಲ್ಲಿ ಗುರುತಿಸಿಕೊಳ್ಳುವ ಮೂಲಕ ಇತರಿಗೆ ಮಾದರಿಯಾಗಬೇಕು ಎಂದರು.ಡಾ.ನಂದಿ ತಾತಾ ಅವರು ಪ್ರಸ್ತಾವಿಕ ಮಾತನಾಡಿದರು.ಕೇಂಬ್ರಿಡ್ಜ್ ತಾಂತ್ರಿಕ ಮಹಾವಿದ್ಯಾಲಯ ನಾರ್ತ್ 29 ವಿದ್ಯಾರ್ಥಿಗಳು ವ್ಯಾಲೆಂಟರ್ಸ್ ಆಗಿ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ತಿಮ್ಮಪ್ಪ ದೇವಸ್ಥಾನದ ಅರ್ಚಕಾರು,ಸಾಗರ ಪಾಟೀಲ್,ಡಾ.ಶಂಕರಗೌಡ,ಸ್ಮಿತಾ ಅಕ್ಕ, ಸುರೇಶ,ಮಲ್ಲಿಕಾರ್ಜುನ ಸಾಹುಕಾರ, ಡಾ. ಅಗರವಾಲ ಆಸ್ಪತ್ರೆ, ವಿರೂಪಾಕ್ಷಿ ಗೌಡ, ಶಾರದ ಅಕ್ಕ,ಹಳೆ ವಿದ್ಯಾರ್ಥಿಗಳು ತಂಡ ಊರಿನ ಗ್ರಾಮಸ್ಥರು ಸೇರಿದಂತೆ ಉಪಸ್ಥಿತರಿದ್ದರು.

ಶ್ರೀ ಅಮರೇಶ್ವರ ಪ್ರೌಢ ಶಾಲೆ ಎಸ್ಎಸ್ಎಲ್ಸಿ ಫಲಿತಾಂಶ 99.48% ಸಾಧನೆ

ಲಿಂಗಸುಗೂರು ಏ. 24

ತಾಲೂಕಿನ ಈಚನಾಳ ಗ್ರಾಮದ ಶ್ರೀಶೈಲ ಮಲ್ಲಿಕಾರ್ಜುನ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ) ವತಿಯಿಂದ ನಡೆಸಲ್ಪಡುವ ಶ್ರೀ ಅಮರೇಶ್ವರ ಅನುದಾನಿತ ಪ್ರೌಢ ಶಾಲೆ 2025-26ನೇ ಸಾಲಿನ ಎಸ್ಎಸ್ಎಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಗಮನಾರ್ಹ

ಸಾಧನೆ ಮಾಡಿದೆ.

ಪರೀಕ್ಷೆಗೆ ಹಾಜರಾದ ಒಟ್ಟು 196 ವಿದ್ಯಾರ್ಥಿಗಳಲ್ಲಿ 195 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶಾಲೆ 99.48% ಫಲಿತಾಂಶ ದಾಖಲಿಸಿದೆ.

ಫಲಿತಾಂಶದ ವಿವರಗಳು ಈ ಕೆಳಗಿನಂತಿವೆ:

ಉನ್ನತ ಶ್ರೇಣಿ - 08 ವಿದ್ಯಾರ್ಥಿಗಳು,ಪ್ರಥಮ ಶ್ರೇಣಿ - 124 ವಿದ್ಯಾರ್ಥಿಗಳು,ದ್ವಿತೀಯ ಶ್ರೇಣಿ - 50 ವಿದ್ಯಾರ್ಥಿಗಳು,ಪಾಸ ಕ್ಲಾಸ್ - 13 ವಿದ್ಯಾರ್ಥಿಗಳು ಶಾಲೆಯ ಟಾಪರ್‌ಗಳಾಗಿ ಶಾಂತಮ್ಮ (590 ಅಂಕ - 94.40%), ಹುಲಗಣ್ಣ (586 ಅಂಕ - 93.76%) ಹಾಗೂ ರಿಹಾನ್ ಬೇಗಂ (566 ಅಂಕ - 90.56%) ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳ ಈ ಶ್ರೇಷ್ಠ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಶರಣಪ್ಪ ಮೇಟಿ, ಆಡಳಿತಾಧಿಕಾರಿಗಳು, ಮುಖ್ಯೋಪಾಧ್ಯಾಯರು ಹಾಗೂ ಎಲ್ಲಾ ಶಿಕ್ಷಕ ವೃಂದ ಅಭಿನಂದನೆ ವ್ಯಕ್ತಪಡಿಸಿದ್ದಾರೆ.

ಈ ಫಲಿತಾಂಶವು ಶಾಲೆಯ ಗುಣಮಟ್ಟದ ಶಿಕ್ಷಣ ಮತ್ತು ಶಿಕ್ಷಕರ ಪರಿಶ್ರಮಕ್ಕೆ ಸಾಕ್ಷಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತವಾಗಿದೆ.

ರಾಯಚೂರು ಬಿರುಬಿಸಿಲು: ಕಚೇರಿ ಕೆಲಸಗಳ ಸಮಯ ಪರಿಷ್ಕರಣೆ ಉಪಯೋಗವಾಗುತ್ತಿದೆಯೇ?

ಸಾರ್ವಜನಿಕ ಸೇವೆಗಳ ಲಭ್ಯತೆ, ಜನರ ಅನುಕೂಲತೆ ಹಾಗೂ ವ್ಯವಸ್ಥೆಯಿಂದ ಸರಾಗ ಕಾರ್ಯಾಚರಣೆ ಎಲ್ಲವೂ ಸಮತೋಲನದಲ್ಲಿ ನಡೆದಾಗ ಮಾತ್ರ ಈ ನಿರ್ಧಾರ ನಿಜವಾದ ಅರ್ಥದಲ್ಲಿ ಫಲಕಾರಿಯಾಗುತ್ತದೆ. ಆದ್ದರಿಂದ, ಈ ಕ್ರಮವನ್ನು ನಿರಂತರವಾಗಿ ಪರಿಶೀಲಿಸಿ, ಜನರ ಅಭಿಪ್ರಾಯಗಳನ್ನು ಒಳಗೊಂಡು ಅಗತ್ಯ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುವುದೇ ಉತ್ತಮ ಮಾರ್ಗವಾಗಿದೆ.

ಕಲ್ಯಾಣ ಕರ್ನಾಟಕದಲ್ಲಿ ಬಿಸಿಲು ದಿನೇ ದಿನೆ ತೀವ್ರವಾಗುತ್ತಿದ್ದು, ಪ್ರಮುಖವಾಗಿ ರಾಯಚೂರು ಜಿಲ್ಲೆಯಲ್ಲಿ ಬೇಸಿಗೆ ಕಾಲದಲ್ಲಿ ತಾಪಮಾನ ಗರಿಷ್ಠ ಮಟ್ಟ ತಲುಪುತ್ತಿದೆ. ಈ ಬಿರುಬಿಸಿಲು ಕಂಡುಬಂದ ಹಿನ್ನೆಲೆಯಲ್ಲಿ, ಸಾರ್ವಜನಿಕರ ಆರೋಗ್ಯ ಹಾಗೂ ಸರ್ಕಾರಿ ನೌಕರರ ಕಾರ್ಯಕ್ಷಮತೆಯನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾಡಳಿತವು ಕಚೇರಿ ಕೆಲಸಗಳ ಸಮಯವನ್ನು ಪರಿಷ್ಕರಿಸಿದೆ. ಆದರೆ, ಈ ಕ್ರಮವು ನಿಜಕ್ಕೂ ಜನರಿಗೆ ಉಪಯೋಗವಾಗುತ್ತಿದೆಯೇ ಎಂಬ ಪ್ರಶ್ನೆ ಇದೀಗ ಉದ್ಭವಿಸಿದೆ.

ಜಿಲ್ಲಾಡಳಿತದ ಹೊಸ ವೇಳಾಪಟ್ಟಿಯ ಪ್ರಕಾರ, ಕಚೇರಿಗಳು ಬೆಳಿಗ್ಗೆ ಬೇಗ ಆರಂಭವಾಗಿ ಮಧ್ಯಾಹ್ನದ ತೀವ್ರ ಬಿಸಿಲಿನ ಸಮಯವನ್ನು ತಪ್ಪಿಸುವಂತೆ ರೂಪಿಸಲಾಗಿದೆ. ಇದರಿಂದ ಸರ್ಕಾರಿ ನೌಕರರಿಗೆ ಬಿಸಿಲಿನ ತಾಪದಿಂದ ಸ್ವಲ್ಪ ಮಟ್ಟಿನ ರಕ್ಷಣೆ ದೊರೆಯುತ್ತಿದೆ. ಆದರೆ ಸಾರ್ವಜನಿಕರಿಗೆ ಕೆಲಸಗಳು ವಿಳಂಬವಾಗಿತ್ತಿದ್ದು, ಬೇಸರದ ಮುಖವಾಡವಿದೆ.

ವಿದ್ಯಾ ಪಾಟೀಲ್ ಮಾತನಾಡಿ, ''ಲಿಂಗಸುಗೂರು, ಮಸ್ಕಿ, ಸಿಂಧನೂರು ತಾಲೂಕು ಸುತ್ತಮುತ್ತ ಹಳ್ಳಿಗಳಿಂದ ಜಿಲ್ಲೆಗೆ ಹೋಗಬೇಕಾದರೆ ಸುಮಾರು 100 ಕಿಲೋ ಮೀಟರ್ ಅಂತರವಿದೆ. ಬೆಳಗಿನ ಜಾವ ಬಸ್ ವ್ಯವಸ್ಥೆಯಿಲ್ಲ. ಆದರೂ ಹಾಗೆ ಹೀಗೆ ಬಸ್ ಬಂದಾಗ ತೆರಳಿದರೂ ಸುಮಾರು 3 ಗಂಟೆ ಪ್ರಯಾಣಿಸಿ ಬರುವಷ್ಟರಲ್ಲಿ ಮಧ್ಯಾಹ್ನ ಆಗಿರುತ್ತದೆ. ಕಚೇರಿಗಳು ಬಂದ್ ಆಗಿರುತ್ತವೆ. ಇದರಿಂದ ಹತ್ತಿರದಲ್ಲಿರುವವರಿಗೆ ಅನುಕೂಲವಾಗಬಹುದೇನೋ. ಆದರೆ ದೂರದಿಂದ ಬರುವವರಿಗೆ ತುಂಬಾ ಅನಾನುಕೂಲವಾಗಿದೆ. ಹೀಗೆ ಎರಡು ತಿಂಗಳು ಸಮಸ್ಯೆ ಎದುರಿಸಬೇಕಾದ ದುಃಸ್ಥಿತಿ ಎದುರಾಗಿದೆ'' ಎಂದು ಅಳಲು ತೋಡಿಕೊಂಡರು.

''ಸಮಯ ಬದಲಾವಣೆಯಿಂದ ಸಾರ್ವಜನಿಕರಿಗೆ ಹೆಚ್ಚಾಗಿ ತೊಂದರೆಯಾಗುತ್ತಿದೆ. ಸರ್ಕಾರಿ ಅಧಿಕಾರಿಗಳು ಮೊದಲೇ ಅಷ್ಟರಮಟ್ಟಿಗೆ ಕೆಲಸ ಮಾಡಿಕೊಡುತ್ತಾರೆ. ಇನ್ನು ಹೀಗಾಗಿರುವುದು ಅವರಿಗೆ ಇನ್ನೂ ಅನುಕೂಲ. ಸಾರ್ವಜನಿಕರಿಗೆ ಇದರಿಂದ ಯಾವುದೇ ಪ್ರಯೋಜನ ಇಲ್ಲ. ಜನ ಜಿಲ್ಲಾ ಕೇಂದ್ರಕ್ಕೆ, ಜಿಲ್ಲಾ ಕಚೇರಿಗಳಿಗೆ ಅಲೆದಾಡಿ ಸುಸ್ತಾಗಿದ್ದಾರೆ. ಇದಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಅಧಿಕಾರಿಗಳು ಸಭೆ ಮತ್ತು ಇನ್ನಿತರ ಫೀಲ್ಡ್‌ಗಳಿಗೆ ಹೋಗುವುದಿದ್ದರೆ ಮುಂಚಿತವಾಗಿ ನೊಟೀಸ್ ಹೊರಡಿಸುವಂತಹ ವ್ಯವಸ್ಥೆ ಮಾಡಬೇಕು. ಜನರಿಗೆ ವಿಷಯ ತಲುಪುವ ರೀತಿ ಮಾಡಿದರೆ, ಕೊನೆಪಕ್ಷ ಅವರು ಬಂದು ಕಾಯುವುದಾದರೂ ತಪ್ಪುತ್ತದೆ'' ಎಂದು ತಿಳಿಸಿದರು.

ಕರ್ನಾಟಕ ಜನಶಕ್ತಿ ಜಿಲ್ಲಾ ಮುಖಂಡ ಮಾರೆಪ್ಪ ಹರವಿ ಮಾತನಾಡಿ, ''ಸಮಯದ ಬದಲಾವಣೆ ಸಾರ್ವಜನಿಕರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಗ್ರಾಮೀಣ ಪ್ರದೇಶಗಳಿಂದ ಬರುವ ಜನರು ಬೆಳಿಗ್ಗೆ ಬೇಗ ಕಚೇರಿಗಳಿಗೆ ತಲುಪುವುದು ಕಷ್ಟಕರವಾಗಿದೆ. ಹಳ್ಳಿಗಳಿಂದ ಬಸ್ ಸೌಲಭ್ಯಗಳು ಎಲ್ಲ ಸಮಯಕ್ಕೂ ಲಭ್ಯವಿಲ್ಲ. ಬೆಳಗಿನ ಜಾವದಲ್ಲಿ ಬರಲು ಆಟೋಗಳು ಸಿಗದ ಪರಿಸ್ಥಿತಿ. ಹಾಗಾಗಿ ಕಚೇರಿಗಳಿಗೆ ಸಮಯಕ್ಕೆ ಸರಿಯಾಗಿ ತೆರಳಲು ಆಗುತ್ತಿಲ್ಲ. ಇನ್ನಿತರ ಹೊಸ ಸಮಯಕ್ಕೆ ಹೊಂದಿಕೊಳ್ಳಲು ಇನ್ನೊಂದು ರೀತಿ ಸಮಸ್ಯೆಯಾಗುತ್ತಿದೆ'' ಎಂದು ಹೇಳಿದ್ದಾರೆ.

''ಕಚೇರಿ ಸಮಯ ಬದಲಾವಣೆಯಿಂದ ವ್ಯವಹಾರ ಚಟುವಟಿಕೆಗಳಲ್ಲಿ ವ್ಯತ್ಯಾಸ ಉಂಟಾಗಿದೆ. ಸಮಯ ಬದಲಾವಣೆಯಿಂದ ಸರ್ಕಾರಿ ಕಚೇರಿ ಕೆಲಸಗಳ ಸಮಯ ಕಡಿಮೆಯಾಗಿರುವುದರಿಂದ ಕೆಲವು ಸೇವೆಗಳು ವಿಳಂಬವಾಗುತ್ತಿವೆ. ಸುಮಾರು ವರ್ಷಗಳಿಂದ ಜನರ ಮಧ್ಯೆ ಸಂಘಟಕರಾಗಿ ಕೆಲಸ ಮಾಡುತ್ತಿದ್ದೇವೆ. ಬೇಸಿಗೆ ದಿನ ಹೊರೆತುಪಡಿಸಿ ಬೇರೆ ದಿನಗಳಲ್ಲಿಯೂ ಅಧಿಕಾರಿಗಳು ವಾರಗಟ್ಟಲೆ ಕೈಗೆ ಸಿಗುವುದಿಲ್ಲ. ಮೀಟಿಂಗ್ ಹೋಗಿದ್ದಾರೆ, ರಜೆ ಮೇಲೆ ಇದ್ದಾರೆ ಎನ್ನುವಂತಹ ಮಾತುಗಳನ್ನೇ ಕೇಳಿಕೊಂಡು ಬರಬೇಕು. ಈಗ ಸಮಯ ಬದಲಾವಣೆಯಿಂದ ಮತ್ತಷ್ಟು ಹದಗೆಟ್ಟಿದೆ. ಹಾಗಾಗಿ ಈ ಬಗ್ಗೆ ಸಾರ್ವಜನಿಕರಿಂದ ತೀವ್ರ ಅಸಮಾಧಾನ ವ್ಯಕ್ತವಾಗಿದೆ'' ಎಂದರು.

ಬಹುಜನ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಶರಣಪ್ಪ ಬಲ್ಲಟಗಿ ಮಾತನಾಡಿ, ''ಕಚೇರಿಗಳಲ್ಲಿ ಕೆಲಸದ ಅವಧಿ ಕಡಿಮೆಯಾಗಿರುವುದರಿಂದ ಇದು ಎರಡು ತಿಂಗಳ ರಜೆಯಂತಾಗಿದೆ. ಕಚೇರಿ ಬೆಳಿಗ್ಗೆ 8ಕ್ಕೆ ಆರಂಭವಾಗಬೇಕಾದರೂ ಹಲವಾರು ಅಧಿಕಾರಿಗಳು 10 ಗಂಟೆಯ ನಂತರವೇ ಬರುತ್ತಿದ್ದಾರೆ. ಇದರಿಂದ ಸಾರ್ವಜನಿಕರ ಕೆಲಸಗಳು ಹಿನ್ನಡೆಯಾಗುತ್ತಿವೆ'' ಎಂದು ಆರೋಪಿಸಿದರು.

''ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಬಂದರೂ ಕೂಡ, ಜನರು ಸಾಲಿನಲ್ಲಿ ನಿಂತು ಭೇಟಿಯಾಗುವುದಕ್ಕೆ ಸಾಕಷ್ಟು ಸಮಯ ಸಿಗುತ್ತಿಲ್ಲ. ಇನ್ನು ಕಚೇರಿ ಸಮಯ ಮುಗಿದ ಬಳಿಕ ನಾವುಗಳು ಮನೆಗೆ ಹೊರಡುವುದಕ್ಕೂ ಅನುಕೂಲಕರ ಪರಿಸ್ಥಿತಿ ಇಲ್ಲ'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

''ಮಧ್ಯಾಹ್ನ 1ರ ವೇಳೆಗೆ ಬಿಸಿಲಿನ ತಾಪಮಾನ ತೀವ್ರವಾಗಿರುತ್ತದೆ. ಈ ವೇಳೆ ಅಧಿಕಾರಿಗಳು ಮನೆಗೆ ಹೋಗುವುದಕ್ಕಿಂತ ಕಚೇರಿಗಳಿಗೆ ಟಿಫಿನ್‌ಗಳನ್ನು ತೆಗೆದುಕೊಂಡು ಬರಬೇಕು, ಮಧ್ಯಾಹ್ನದ ಊಟವನ್ನು ಕಚೇರಿಯಲ್ಲೇ ಮಾಡಬೇಕು. ಸಂಜೆ 4ರ ನಂತರ ಬಿಸಿಲು ಕಡಿಮೆಯಾಗುವಾಗ ತೆರಳುವುದು ಉತ್ತಮ ಎಂದು ಸಲಹೆ ನೀಡಿದರು.

ಜಿಲ್ಲಾ ವೈದ್ಯಾಧಿಕಾರಿ ಸುರೇಂದ್ರ ಮಾತನಾಡಿ, ''ತೀವ್ರ ಬಿಸಿಲಿನ ಸಮಯದಲ್ಲಿ ಹೊರಗಡೆ ಚಟುವಟಿಕೆ ಕಡಿಮೆ ಮಾಡುವುದು ಅವಶ್ಯಕ. ತುಂಬಾ ಬಿಸಿಲು ಇದ್ದಾಗ ಹೊರಗೆ ಹೋಗಬೇಡಿ, ರಸ್ತೆ ಕೆಲಸ, ಕೃಷಿ ಕಾರ್ಮಿಕರು ಬಿಸಿಲಲ್ಲಿ ಕೆಲಸ ಮಾಡುವವರು ಆರೋಗ್ಯದ ಮೇಲೆ ಹೆಚ್ಚು ಗಮನ ಕೊಡಬೇಕು. ಮಧ್ಯಾಹ್ನ ಹೊತ್ತು ಮಕ್ಕಳು, ವೃದ್ಧರು ಹೊರಗಡೆ ಹೋಗಬಾರದು'' ಎಂದರು.

ಹೆಸರು ಹೇಳಲು ಇಚ್ಛಿಸದ ಅಧಿಕಾರಿಯೊಬ್ಬರು ಮಾತನಾಡಿ, ''ಫೀಲ್ಡ್‌ನಲ್ಲಿ ಕೆಲಸ ಮಾಡುವವರಿಗೆ ಆಶಾ ಕಾರ್ಯಕರ್ತೆಯರು, ಜೆಸ್ಕಾಂ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ಬಿಸಿಲಿನಲ್ಲಿ ಕೆಲಸ ಮಾಡುವ ವೇಳೆ ಪರಿತಪ್ಪಿಸುವಂತಾಗುತ್ತದೆ. ಕಚೇರಿಯಲ್ಲಿ ಕೂತು ಕೆಲಸ ಮಾಡುವ ಅಧಿಕಾರಿಗಳಿಗೆ ಸಮಯ ಬದಲಾವಣೆ, ಬಿಸಿಲಿನ ತಾಪಮಾನ ಹೆಚ್ಚು ಕಂಡುಬರಲ್ಲ'' ಎಂದು ಹೇಳಿದರು.

''ಸಮಯ ಬದಲಾವಣೆಯಿಂದ ಹಳ್ಳಿ ಜನರಿಗೆ ತೊಂದರೆ ಉಂಟಾಗುತ್ತಿದೆ. ಎರಡು ತಿಂಗಳು ಕೂಡ ಜನರು ಬರಲು ಹಿಂದೇಟು ಹಾಕುತ್ತಾರೆ. ಕಚೇರಿಗಳಿಗೆ ಬರಲು ತಡವಾಗುತ್ತೆ, ಹೋದಾಗ ಕೆಲಸ ಆಗಲ್ಲ ಎಂದು ಅವರೇ ಊಹೆ ಮಾಡಿಕೊಳ್ಳುವುದನ್ನು ಬಿಡಬೇಕು'' ಎಂದು ಸಲಹೆ ನೀಡಿದರು.

ಮಹಾನಗರ ಪಾಲಿಕೆ ಆಯುಕ್ತರಾದ ಜುಬಿನ್ ಮಹೋತ್ರ ಮಾತನಾಡಿ, ''ಬಿಸಿಲಿನ ತಾಪಮಾನ ಹೆಚ್ಚಾಗಿರುವುದರಿಂದ ಸಮಯ ಬದಲಾವಣೆ ಅವಶ್ಯಕ. ಪೌರ ಕಾರ್ಮಿಕರು ಬಿಸಿಲಲ್ಲಿ ಸೇವೆ ಸಲ್ಲಿಸಿ ಸುಸ್ತಾಗುತ್ತಾರೆ. ಸಾರ್ವಜನಿಕರಿಗೆ ತೊಂದರೆಯುಂಟಾಗಿರುವುದು ಗಮನಕ್ಕೆ ಬಂದರೆ ಅದನ್ನು ಬಗೆಹರಿಸಲಾಗುವುದು'' ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕದಲ್ಲಿ ಹೆಚ್ಚುತ್ತಿರುವ ಬಿಸಿಲಿನ ತೀವ್ರತೆ ಸಾರ್ವಜನಿಕರ ಜೀವನದ ಮೇಲೆ ನೇರ ಪರಿಣಾಮ ಬೀರುತ್ತಿರುವುದು ಸ್ಪಷ್ಟವಾಗಿದೆ. ರಾಯಚೂರು ಜಿಲ್ಲೆಯಂತಹ ಪ್ರದೇಶಗಳಲ್ಲಿ ತಾಪಮಾನ ಗರಿಷ್ಠ ಮಟ್ಟ ತಲುಪುತ್ತಿರುವ ಸಂದರ್ಭದಲ್ಲಿ, ಜಿಲ್ಲಾಡಳಿತವು ಕಚೇರಿ ವೇಳಾಪಟ್ಟಿಯನ್ನು ಪರಿಷ್ಕರಿಸಿರುವುದು ಒಂದು ಸಮಂಜಸ ಹಾಗೂ ಅಗತ್ಯ ಕ್ರಮವೆಂದು ಕಾಣಿಸುತ್ತದೆ. ಇದು ಸರ್ಕಾರಿ ನೌಕರರ ಆರೋಗ್ಯವನ್ನು ಕಾಪಾಡುವುದರ ಜತೆಗೆ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಪ್ರಯತ್ನವೂ ಆಗಿದೆ. ಆದರೆ ಈ ಕ್ರಮದ ಯಶಸ್ಸು ಜನಸಾಮಾನ್ಯರ ಅನುಭವದ ಮೇಲೆ ಅವಲಂಬಿತವಾಗಿದೆ.

ಸಾರ್ವಜನಿಕ ಸೇವೆಗಳ ಲಭ್ಯತೆ, ಜನರ ಅನುಕೂಲತೆ ಹಾಗೂ ವ್ಯವಸ್ಥೆಯಿಂದ ಸರಾಗ ಕಾರ್ಯಾಚರಣೆ ಎಲ್ಲವೂ ಸಮತೋಲನದಲ್ಲಿ ನಡೆದಾಗ ಮಾತ್ರ ಈ ನಿರ್ಧಾರ ನಿಜವಾದ ಅರ್ಥದಲ್ಲಿ ಫಲಕಾರಿಯಾಗುತ್ತದೆ. ಆದ್ದರಿಂದ, ಈ ಕ್ರಮವನ್ನು ನಿರಂತರವಾಗಿ ಪರಿಶೀಲಿಸಿ, ಜನರ ಅಭಿಪ್ರಾಯಗಳನ್ನು ಒಳಗೊಂಡು ಅಗತ್ಯ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುವುದೇ ಉತ್ತಮ ಮಾರ್ಗವಾಗಿದೆ.

ಪ್ರವಾಸಿಗರ ಮೇಲೆ ಅತ್ಯಾಚಾರ: ಕಾಮುಕರ ವಿಕೃತಿಗೆ ಮಹಿಳೆ ಮಾತ್ರವಲ್ಲ ದೇಶದ ಪ್ರತಿಷ್ಠೆಯೂ ಬಲಿ

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ () ಇತ್ತೀಚೆಗೆ ಬಿಡುಗಡೆ ಮಾಡಿದ ದಾಖಲೆ ಪ್ರಕಾರ ದೇಶದಲ್ಲಿ ಪ್ರತಿ 16 ನಿಮಿಷಕ್ಕೆ ಒಂದು ಅತ್ಯಾಚಾರ ಪ್ರಕರಣ ವರದಿಯಾಗುತ್ತಿದೆ. 2021ರಲ್ಲಿ 14 ವಿದೇಶಿ ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದರೆ, 2022ರಲ್ಲಿ ಈ ಸಂಖ್ಯೆ 28ಕ್ಕೆ ಏರಿಕೆಯಾಗಿದೆ.

ಭಾರತವು ಜಗತ್ತಿಗೆ ಅತಿಥಿ ದೇವೋ ಭವ (ಅತಿಥಿಯೇ ದೇವರು) ಎಂಬ ಸಂಸ್ಕೃತಿಯನ್ನು ಪರಿಚಯಿಸಿದ ದೇಶ. ಆದರೆ ನಮ್ಮ ದೇಶದಲ್ಲಿ ಸದ್ಯ ನಡೆಯುತ್ತಿರುವುದೇನು? ಅತಿಥಿಗಳನ್ನು ನಮ್ಮವರು ಕನಿಷ್ಠ ಮನುಷ್ಯರನ್ನಾಗಿಯಾದರೂ ಕಾಣುತ್ತಿದ್ದಾರೆಯೇ? ಖಂಡಿತವಾಗಿಯೂ ಇಲ್ಲ. ಅತಿಥಿ ಬಿಡಿ ಕನಿಷ್ಠ ಅವರೂ ಮನುಷ್ಯರು ಎಂದು ಕಾಣುತ್ತಿದ್ದರೆ ನಮ್ಮಲ್ಲಿ ಪ್ರವಾಸಿಗರ ಮೇಲೆ ಅತ್ಯಾಚಾರ ನಡೆಯುತ್ತಿರಲಿಲ್ಲ. ವಿದೇಶಿಯರ ಕಣ್ಣಿನಲ್ಲಿ ಭಾರತ ಮಹಿಳೆಯರಿಗೆ ಸುರಕ್ಷಿತವಲ್ಲದ ದೇಶ ಎಂದೆನಿಸಿಕೊಳ್ಳುವ ಮಟ್ಟಿಗೆ ತಲುಪಿದೆ!

ಹಂಪಿ, ಕೊಡಗು, ಗೋವಾ, ಜಾರ್ಖಂಡ್ ಹೀಗೆ ಕಳೆದ ಹಲವು ವರ್ಷಗಳಿಂದ ದೇಶದಲ್ಲಿ ಪ್ರವಾಸಕ್ಕೆ ಬಂದ ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿರುವ ಭೀಭತ್ಸ ಕೃತ್ಯಗಳು ನಡೆದಿವೆ. ಪ್ರವಾಸಿಗರ ಮೇಲೆ ನಡೆದ ಈ ಕೃತ್ಯಗಳು ದೇಶದಲ್ಲಿ ಮಾತ್ರವಲ್ಲ ಜಾಗತಿಕವಾಗಿ ಸದ್ದು ಮಾಡಿವೆ. ಕಾಮುಕರ ಈ ವಿಕೃತಿಗೆ ಮಹಿಳೆಯರು ಮಾತ್ರವಲ್ಲ ದೇಶದ ಪ್ರತಿಷ್ಠೆಯೂ ಬಲಿಯಾಗುತ್ತಿದೆ. ಪ್ರವಾಸೋದ್ಯಮಕ್ಕೂ ನಿಧಾನವಾಗಿ ಏಟು ಬೀಳುತ್ತಲಿದೆ. ಅಮೆರಿಕ, ಯುಕೆ, ಆಸ್ಟ್ರೇಲಿಯಾ ಸೇರಿದಂತೆ ಹಲವು ದೇಶಗಳು ''ಭಾರತ ಮಹಿಳೆಯರಿಗೆ ಸುರಕ್ಷಿತವಲ್ಲ'' ಎಂಬ ಎಚ್ಚರಿಕೆಯನ್ನು ತಮ್ಮ ಪ್ರವಾಸಿಗರಿಗೆ ನೀಡುವ ಹಂತಕ್ಕೆ ದೇಶದ ಪ್ರತಿಷ್ಠೆ ಸ್ಥಾನಮಾನ ಇಳಿದಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ () ಇತ್ತೀಚೆಗೆ ಬಿಡುಗಡೆ ಮಾಡಿದ ದಾಖಲೆ ಪ್ರಕಾರ ದೇಶದಲ್ಲಿ ಪ್ರತಿ 16 ನಿಮಿಷಕ್ಕೆ ಒಂದು ಅತ್ಯಾಚಾರ ಪ್ರಕರಣ ವರದಿಯಾಗುತ್ತಿದೆ. 2021ರಲ್ಲಿ 14 ವಿದೇಶಿ ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದರೆ, 2022ರಲ್ಲಿ ಈ ಸಂಖ್ಯೆ 28ಕ್ಕೆ ಏರಿಕೆಯಾಗಿದೆ. ಇತ್ತೀಚೆಗೆ 2025 ಮತ್ತು 2026ರಲ್ಲಿ ಕೊಡಗು ಮತ್ತು ಕೊಪ್ಪಳದ ಹಂಪಿಯಲ್ಲಿ ನಡೆದ ಅತ್ಯಾಚಾರ ಕೃತ್ಯಗಳು ದೇಶವನ್ನು ಬೆಚ್ಚಿಬೀಳಿಸಿತ್ತು.

ಕೊಪ್ಪಳ: ಇಸ್ರೇಲ್ ಮಹಿಳೆ ಅತ್ಯಾಚಾರ, ಕೊಲೆ

2025ರ ಮಾರ್ಚ್ 6ರಂದು ಕೊಪ್ಪಳದ ಹಂಪಿ ಸಮೀಪದ ಸಣಾಪುರ ಕೆರೆಯ ಬಳಿ ನಡೆದ ಈ ಘಟನೆ ಇಡೀ ದೇಶವನ್ನು ಬೆಚ್ಚಿಬೀಳಿಸಿತ್ತು. ಇಸ್ರೇಲ್ ಮೂಲದ ಮಹಿಳೆ ಮತ್ತು ಆಕೆಯ ಸ್ನೇಹಿತರು ನಕ್ಷತ್ರ ವೀಕ್ಷಣೆಗೆ () ಹೋದಾಗ ಮೂವರು ದುಷ್ಕರ್ಮಿಗಳು ದಾಳಿ ಮಾಡಿದ್ದರು. ಈ ವೇಳೆ ಇಸ್ರೇಲ್ ಮಹಿಳೆ ಮತ್ತು ಸ್ಥಳೀಯ ಹೋಂಸ್ಟೇ ಮಾಲೀಕೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿತ್ತು. ಪ್ರವಾಸಿಗರ ಗುಂಪಿನಲ್ಲಿದ್ದ ಒಡಿಶಾ ಮೂಲದ ಬಿಬಾಸ್ ಕುಮಾರ್ ಎಂಬುವವರನ್ನು ಕಾಲುವೆಗೆ ತಳ್ಳಿ ಕೊಲೆ ಮಾಡಲಾಗಿತ್ತು. ಮತ್ತೊಬ್ಬ ಅಮೆರಿಕದ ಪ್ರವಾಸಿಯ ಮೇಲೆ ಹಲ್ಲೆ ನಡೆಸಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದ್ದಂತೆ ಕೊಪ್ಪಳ ನ್ಯಾಯಾಲಯವು ಕೇವಲ 9 ತಿಂಗಳ ಅವಧಿಯಲ್ಲಿ ವಿಚಾರಣೆ ಮುಗಿಸಿ ಐತಿಹಾಸಿಕ ತೀರ್ಪು ನೀಡಿದೆ. ಈ ಘೋರ ಕೃತ್ಯ ಎಸಗಿದ ಮೂವರು ಆರೋಪಿಗಳಿಗೆ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿದೆ.

ಕೊಡಗು ಹೋಂಸ್ಟೇ ಅತ್ಯಾಚಾರ ಪ್ರಕರಣ

ಕೊಡಗಿನ ಕುಟ್ಟ ಸಮೀಪದ ಖಾಸಗಿ ಹೋಂಸ್ಟೇನಲ್ಲಿ ಇತ್ತೀಚೆಗೆ ಅಮೆರಿಕ ಮೂಲದ ಪ್ರವಾಸಿ ಮಹಿಳೆಯ ಮೇಲೆ ಅತ್ಯಾಚಾರ ನಡೆದಿದೆ. ಮಹಿಳೆಗೆ ಮಾದಕ ದ್ರವ್ಯ ಮಿಶ್ರಿತ ಪಾನೀಯ ನೀಡಿ ಅತ್ಯಾಚಾರ ಎಸಗಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಪ್ರಕರಣ ಮುಚ್ಚಿಹಾಕುವ ಯತ್ನವೂ ನಡೆದಿತ್ತು. ಅತ್ಯಾಚಾರದ ನಂತರ ಮಹಿಳೆಗೆ ಹೊರಗಿನವರನ್ನು ಸಂಪರ್ಕಿಸಲು ಸಾಧ್ಯವಾಗದಂತೆ ಹೋಂಸ್ಟೇನ ವೈಫೈ ಕಡಿತಗೊಳಿಸಲಾಗಿತ್ತು. ಆಕೆಯನ್ನು ಅಲ್ಲಿಯೇ ಕೂಡಿಹಾಕುವ ಪ್ರಯತ್ನ ನಡೆದಿತ್ತು. ಸಂತ್ರಸ್ತೆ ಅಲ್ಲಿಂದ ಹೇಗೋ ತಪ್ಪಿಸಿಕೊಂಡು ಮೈಸೂರಿಗೆ ಬಂದು, ಅಮೆರಿಕ ರಾಯಭಾರ ಕಚೇರಿಯನ್ನು ಸಂಪರ್ಕಿಸಿದ ನಂತರ ಪ್ರಕರಣ ಬೆಳಕಿಗೆ ಬಂದಿದೆ. ಪೊಲೀಸರು ಜಾರ್ಖಂಡ್ ಮೂಲದ ಮುಖ್ಯ ಆರೋಪಿಯನ್ನು ಹಾಗೂ ಮಾಹಿತಿ ಮುಚ್ಚಿಟ್ಟಿದ್ದಕ್ಕಾಗಿ ಹೋಂಸ್ಟೇ ಮಾಲೀಕನನ್ನು ಬಂಧಿಸಿದ್ದಾರೆ.

ಜಾರ್ಖಂಡ್‌ನಲ್ಲಿ ಸ್ಪೇನ್ ಮೂಲಕ ಮಹಿಳೆ ಮೇಲೆ ಅತ್ಯಾಚಾರ

ಸ್ಪೇನ್ ಮೂಲದ ದಂಪತಿಗಳು ಬೈಕ್ ಮೂಲಕ ಪ್ರವಾಸ ಕೈಗೊಂಡಿದ್ದರು. 2024ರ ಮಾರ್ಚ್ 1ರಂದು ರಾತ್ರಿ ಜಾರ್ಖಂಡ್‌ನ ದುಮ್ಕಾ ಜಿಲ್ಲೆಯ ಹಂಸದಿಹಾ ಬಳಿ ಟೆಂಟ್ ಹಾಕಿ ತಂಗಿದ್ದಾಗ, ಸುಮಾರು 7 ರಿಂದ 10 ಜನರ ತಂಡವೊಂದು ದಂಪತಿಗಳ ಮೇಲೆ ಹಲ್ಲೆ ನಡೆಸಿ, ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿತ್ತು. ಈ ಘಟನೆ ಬಳಿಕ ಜಾರ್ಖಂಡ್ ಪೊಲೀಸರು ವಿಶೇಷ ತನಿಖಾ ತಂಡವನ್ನು ರಚಿಸಿ, ಈ ಕೃತ್ಯದಲ್ಲಿ ಭಾಗಿಯಾಗಿದ್ದ ಎಂಟು ಆರೋಪಿಗಳನ್ನು ಬಂಧಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿಗಳ ಅನ್ವಯ, ಸಂತ್ರಸ್ತ ಮಹಿಳೆಗೆ ಜಿಲ್ಲಾ ಆಡಳಿತವು ₹10 ಲಕ್ಷ ಮಧ್ಯಂತರ ಪರಿಹಾರ ಧನವನ್ನು ನೀಡಿದೆ.

ಗೋವಾದಲ್ಲಿ ಪ್ರವಾಸಿಗರ ಮೇಲೆ ಅತ್ಯಾಚಾರ

ಗೋವಾದಲ್ಲಿ ಪ್ರವಾಸಿಗರ ಮೇಲೆ ಅತ್ಯಾಚಾರ ಪ್ರಕರಣಗಳು ಅಧಿಕವಾಗಿ ದಾಖಲಾಗುತ್ತಿದೆ. ದಕ್ಷಿಣ ಗೋವಾದ ಕೆಲವು ಶಾಂತ ಮತ್ತು ನಿರ್ಜನ ಬೀಚ್‌ಗಳಲ್ಲಿ ಭದ್ರತೆಯ ಕೊರತೆಯನ್ನು ಬಳಸಿಕೊಂಡು ಪ್ರವಾಸಿಗರ ಮೇಲೆ ಅತ್ಯಾಚಾರ ಕೃತ್ಯಗಳನ್ನು ನಡೆಸಲಾಗುತ್ತಿದೆ. ಈ ಹಿಂದೆ ಪಾಲೋಲೆಮ್ () ಸಮೀಪ ಬ್ರಿಟಿಷ್ ಪ್ರವಾಸಿ ಮಹಿಳೆಯ ಮೇಲೆ ನಡೆದ ದೌರ್ಜನ್ಯವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗಿತ್ತು. ಈ ಪ್ರಕರಣದಲ್ಲಿ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಕೆಲವು ನಕಲಿ ಮಸಾಜ್ ಪಾರ್ಲರ್‌ಗಳಲ್ಲಿ ಅಥವಾ ಅಸುರಕ್ಷಿತ ವಾಸ್ತವ್ಯದ ಸ್ಥಳಗಳಲ್ಲಿ ಪ್ರವಾಸಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುವ ಘಟನೆಗಳು ಆಗಾಗ ವರದಿಯಾಗುತ್ತಿವೆ.

ಈ ಎಲ್ಲ ಘಟನೆಗಳು ದೇಶದ ಪ್ರವಾಸೋದ್ಯಮದ ಮೇಲೆ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶದ ಪ್ರತಿಷ್ಠೆಯ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಈ ಹಿನ್ನೆಲೆಯಲ್ಲಿ ವಿಶ್ವದ ಪ್ರಮುಖ ದೇಶಗಳು ತಮ್ಮ ನಾಗರಿಕರಿಗೆ, ವಿಶೇಷವಾಗಿ ಮಹಿಳೆಯರಿಗೆ ಭಾರತ ಪ್ರವಾಸದ ಬಗ್ಗೆ ಕಟ್ಟುನಿಟ್ಟಿನ ಟ್ರಾವೆಲ್ ಅಡ್ವೈಸರಿ (ಪ್ರವಾಸ ಸಲಹೆ) ನೀಡುತ್ತಿವೆ.

ಅಮೆರಿಕವು ಭಾರತವನ್ನು 2 (ಹೆಚ್ಚಿನ ಜಾಗರೂಕತೆ ವಹಿಸಿ) ಪಟ್ಟಿಯಲ್ಲಿಟ್ಟಿದೆ. ''ಭಾರತದಲ್ಲಿ ಅತ್ಯಾಚಾರವು ವೇಗವಾಗಿ ಬೆಳೆಯುತ್ತಿರುವ ಅಪರಾಧಗಳಲ್ಲಿ ಒಂದಾಗಿದೆ. ಪ್ರವಾಸಿ ತಾಣಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯದ ಘಟನೆಗಳು ವರದಿಯಾಗುತ್ತಿವೆ'' ಎಂದು ಅಮೆರಿಕದ ವಿದೇಶಾಂಗ ಇಲಾಖೆ ತಿಳಿಸಿದೆ. ಅಮೆರಿಕ ತನ್ನ ಮಹಿಳಾ ಪ್ರವಾಸಿಗರಿಗೆ ''ಭಾರತದಲ್ಲಿ ಒಬ್ಬರೇ ಪ್ರಯಾಣಿಸಬೇಡಿ'' ಎಂದು ಕಟ್ಟುನಿಟ್ಟಾಗಿ ಎಚ್ಚರಿಕೆ ನೀಡಿದೆ.

ಇನ್ನು ಯುನೈಟೆಡ್ ಕಿಂಗ್‌ಡಮ್ ಭಾರತದಲ್ಲಿನ ಸುರಕ್ಷತೆಯ ಬಗ್ಗೆ ತನ್ನ ಪ್ರಜೆಗಳಿಗೆ ಎಚ್ಚರಿಕೆ ನೀಡಿದೆ. ''ಬ್ರಿಟಿಷ್ ಮಹಿಳೆಯರು ಭಾರತದ ವಿವಿಧ ರಾಜ್ಯಗಳಲ್ಲಿ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಪ್ರವಾಸಿ ತಾಣಗಳಲ್ಲಿ ಮತ್ತು ನಗರಗಳಲ್ಲಿ ಗುಂಪುಗಳಿಂದ ಅಥವಾ ವ್ಯಕ್ತಿಗಳಿಂದ ದೈಹಿಕ ಹಾಗೂ ಮೌಖಿಕ ಕಿರುಕುಳ ಸಾಮಾನ್ಯವಾಗಿದೆ'' ಎಂದು ಯುಕೆ ಹೇಳಿದೆ. ಬೀಚ್‌ಗಳು ಅಥವಾ ಏಕಾಂತ ಪ್ರದೇಶಗಳಿಗೆ ಒಬ್ಬರೇ ಹೋಗಬಾರದು ಮತ್ತು ಸ್ಥಳೀಯ ಸಂಪ್ರದಾಯಕ್ಕೆ ತಕ್ಕಂತೆ ಉಡುಗೆ ಧರಿಸಬೇಕು ಎಂದು ಸೂಚಿಸಿದೆ! (ಈ ವೇಳೆ ಮಹಿಳೆಯ ಮೇಲೆ ಅತ್ಯಾಚಾರ ನಡೆಯಲು ಬಟ್ಟೆ ಕಾರಣವಲ್ಲ, ನೋಡುವ ದೃಷ್ಟಿ ಎಂಬುದನ್ನು ನಾವು ನೆನಪಿಸಿಕೊಳ್ಳುವುದು ಉತ್ತಮ)

ಕೆನಡಾವು ''ಭಾರತದಲ್ಲಿ ಮಹಿಳೆಯರ ವಿರುದ್ಧದ ಅಪರಾಧಗಳು ಹೆಚ್ಚುತ್ತಿವೆ. ಸಾರ್ವಜನಿಕ ಸಾರಿಗೆ, ಟ್ಯಾಕ್ಸಿ ಮತ್ತು ಆಟೋರಿಕ್ಷಾಗಳಲ್ಲಿ ಪ್ರಯಾಣಿಸುವಾಗ ಅತ್ಯಂತ ಜಾಗರೂಕರಾಗಿರಿ'' ಎಂದು ತಿಳಿಸಿದೆ. ಅಪರಿಚಿತರು ನೀಡುವ ಆಹಾರ ಅಥವಾ ಪಾನೀಯಗಳನ್ನು ಸ್ವೀಕರಿಸಬೇಡಿ. ಅದರಲ್ಲಿ ಮಾದಕದ್ರವ್ಯ ಮಿಶ್ರಣ ಮಾಡಿರುವ ಸಾಧ್ಯತೆಯಿದೆ ಎಂದು ಎಚ್ಚರಿಸಿದೆ.

ಆಸ್ಟ್ರೇಲಿಯಾ ಕೂಡ ಭಾರತವನ್ನು ''ಹೆಚ್ಚಿನ ಜಾಗರೂಕತೆ ಅಗತ್ಯವಿರುವ ದೇಶ'' ಎಂದು ವರ್ಗೀಕರಿಸಿದೆ. ''ಆಸ್ಟ್ರೇಲಿಯಾದಲ್ಲಿ ಇರುವುದಕ್ಕಿಂತ ಹೆಚ್ಚಿನ ಮಟ್ಟದ ಲೈಂಗಿಕ ಕಿರುಕುಳ ಅಥವಾ ದೌರ್ಜನ್ಯವನ್ನು ಮಹಿಳೆಯರು ಭಾರತದಲ್ಲಿ ಎದುರಿಸಬೇಕಾಗಬಹುದು'' ಎಂದು ಸ್ಪಷ್ಟವಾಗಿ ಹೇಳಿದೆ. ದೊಡ್ಡ ನಗರಗಳಲ್ಲಿ ಅಥವಾ ಪ್ರವಾಸಿ ತಾಣಗಳಲ್ಲಿಯೂ ಒಬ್ಬರೇ ಸಂಚರಿಸುವುದನ್ನು ತಪ್ಪಿಸಿ ಎಂದು ಸಲಹೆ ನೀಡಿದೆ.

ಇಂತಹ ಎಚ್ಚರಿಕೆಗಳಿಂದಾಗಿ ವಿದೇಶಿ ಮಹಿಳಾ ಪ್ರವಾಸಿಗರು ಭಾರತಕ್ಕೆ ಬರಲು ಹಿಂಜರಿಯುತ್ತಿದ್ದಾರೆ. 2024-25ರ ಅಂಕಿಅಂಶಗಳ ಪ್ರಕಾರ, ಸೋಲೋ ಫೀಮೇಲ್ ಟ್ರಾವೆಲರ್ಸ್ (ಒಬ್ಬರೇ ಪ್ರಯಾಣಿಸುವ ಮಹಿಳೆಯರು) ಸಂಖ್ಯೆಯಲ್ಲಿ ಇಳಿಕೆ ಕಂಡುಬಂದಿದೆ. ಜತೆ ಜತೆಗೆ ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲಿ ಇಂತಹ ಪ್ರಕರಣಗಳು ದೊಡ್ಡ ಸುದ್ದಿಯಾಗುವುದರಿಂದ, ಸುರಕ್ಷಿತ ದೇಶಗಳ ಪಟ್ಟಿಯಲ್ಲಿ ಭಾರತದ ಸ್ಥಾನ ಕೆಳಕ್ಕೆ ಹೋಗುತ್ತಿದೆ.

ಪ್ರವಾಸೋದ್ಯಮ ಒಂದಕ್ಕೆ ಒಂದು ನಂಟು ಹೊಂದಿರುವಂತದ್ದು. ಹೋಟೆಲ್‌ಗಳು, ಟ್ಯಾಕ್ಸಿ ಚಾಲಕರು, ಟೂರ್ ಗೈಡ್‌ಗಳು ಮತ್ತು ಸಣ್ಣ ವ್ಯಾಪಾರಿಗಳು ಪ್ರವಾಸಿಗರನ್ನೇ ನಂಬಿರುತ್ತಾರೆ. ಪ್ರವಾಸಿಗರ ಸಂಖ್ಯೆ ಕಡಿಮೆಯಾದಷ್ಟೂ ಈ ಲಕ್ಷಾಂತರ ಕುಟುಂಬಗಳ ಜೀವನೋಪಾಯಕ್ಕೆ ಸಂಚಕಾರ ಬರುತ್ತದೆ. ವಿದೇಶಿ ಪ್ರವಾಸಿಗರಿಂದ ಬರುವ ವಿದೇಶಿ ಕರೆನ್ಸಿಯು ದೇಶದ ಆರ್ಥಿಕತೆಗೆ ಬಲ ನೀಡುತ್ತದೆ. ಭಯದ ವಾತಾವರಣ ನಿರ್ಮಾಣವಾದಾಗ ಈ ಆದಾಯ ಕುಸಿಯುವ ಅಪಾಯವೂ ಇದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR